# ಕರ್ನಾಟಕ ವಿಕಾಸ
KARNATAK VIKAS

ಜೂನ್ June 2013

## ನೂತನ ಸರ್ಕಾರಕ್ಕೆ ಶುಭಾಶಯಗಳು






ಕೇಂದ್ರ ಪಂಚಾಯತ್ ರಾಜ್ ಸಚಿವರಾದ
ಶ್ರೀ ಕಿಶೋರ್ ಚಂದ್ರದೇವ್ ರವರಿಂದ ಉಡುಪಿ ಜಿಲ್ಲಾ ಪಂಚಾಯತ್,
ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಮತ್ತು ಕಾರ್ಕಳ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಪ್ರಶಸ್ತಿ ಸ್ವೀಕರಿಸುತ್ತಿರುವುದು.



ಅತ್ಯುತ್ತಮ ಸಾಧನೆಗೈದು ಕೇಂದ್ರ ಸರ್ಕಾರದ ಪ್ರಶಸ್ತಿ ಪಡೆದ ಜಿಲ್ಲಾ, ತಾಲ್ಲೂಕು ಹಾಗೂ
ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಮಾನ್ಯ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಅಭಿನಂದಿಸುತ್ತಿರುವುದು.

ಕರ್ನಾಟಕ ವಿಕಾಸ

ಜೂನ್ June 2013

ಸಂಪುಟ : 54
Volume : 54
ಸಂಚಿಕೆ : 07
Issue : 07

# ಈ ಸಂಚಿಕೆಯೊಳಗೆ


5 ಪರಿಚಯ – ಶ್ರೀ ಸಿದ್ದರಾಮಯ್ಯ
ಶ್ರೀ ಹೆಚ್.ಕೆ. ಪಾಟೀಲ್
ಶ್ರೀ ಟಿ.ಎಂ. ವಿಜಯ ಭಾಸ್ಕರ್

8 ಸಚಿವಾಲಯದಿಂದ ಸಂದೇಶ – ಟಿ.ಎಂ. ವಿಜಯ ಭಾಸ್ಕರ್


10 ಯಶೋಗಾಥೆಗಳು – ಶ್ರೀ ಶರತ್ ಕುಮಾರ್. ಎ
ಶ್ರೀ ಕೇಶವಮೂರ್ತಿ

20 ಲೇಖನಗಳು – ಶ್ರೀ ಹೆಚ್.ಜಿ. ಶಿವಾನಂದಮೂರ್ತಿ
ಶ್ರೀ ಹೆಚ್.ಆರ್. ರಮೇಶ್

30 ಪಂಚತಂತ್ರ ವರದಿ

31 ಸಕಾಲ ವರದಿ

32 ಸುತ್ತೋಲೆಗಳು


ಪ್ರಕಾಶಕರು
**ಪಿ.ಕುಮಾರ್**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಭೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ|| ಎಂ.ಎಸ್.ಮಂಜುನಾಥ**
**ನಾಗರಾಜ್ ಬಿ ವಾಗಾ**


**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ
ವಿಳಾಸಕ್ಕೆ ತಲುಪಿಸಬಹುದು

**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com

**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು
# ನಿಮ್ಮ ನುಡಿ




ಕರ್ನಾಟಕ ವಿಕಾಸ ಮಾಸ ಪತ್ರಿಕೆ ನಾಡಿನ ಗ್ರಾಮಗಳ ಸರ್ವಾಂಗೀಣ ಪ್ರಗತಿಯ ಉದಾತ್ತ ಉದ್ದೇಶದಿಂದ ಹೊರಬರುತ್ತಿದೆ. ಗ್ರಾಮೀಣ ಜನರಲ್ಲಿ ಸ್ವಾವಲಂಬನೆ, ಸ್ವಾಭಿಮಾನ ಮತ್ತು ಸ್ವಸ್ಥಾನ ವಾಸದ ಪ್ರಜ್ಞೆಯನ್ನು ಮೂಡಿಸಲು ಸಹಕಾರಿಯಾಗಿದೆ. ಪತ್ರಿಕೆಯ ಮೇ–2013ರ ತಿಂಗಳಿನ ಮುಖ ಪುಟದಲ್ಲಿ ಪ್ರಕಟವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಚಿತ್ರ ಮನಾಕರ್ಷಕವಾಗಿತ್ತು. "ಉದ್ಯೋಗ ಖಾತರಿ ಅಧಿನಿಯಮ ಒಂದು ಹಿನ್ನೆಲೆ", "ಕನಿಷ್ಠ ಕೂಲಿ ದರ–ಕೆಲಸದ ಪರಿಮಾಣ" ಹಾಗೂ "ಉದ್ಯೋಗ ಖಾತರಿ ಯೋಜನೆ – ಕುಂದು ಕೊರತೆ, ದೂರು ವಿಲೇವಾರಿ" ಎಂಬ ಲೇಖನಗಳು ಆ ಯೋಜನೆಯ ಬಗೆಗೆ ವಿಸ್ತೃತವಾದ ವಿಷಯಗಳನ್ನು ವಿವರಿಸಲು ಸಮರ್ಥವಾಗಿದ್ದವು. ಯಶೋಗಾಥೆ ಎಂಬ ಅಂಕಣದಲ್ಲಿ ಪ್ರಕಟವಾದ ಉದ್ಯೋಗ ಖಾತರಿ ಯೋಜನೆ ಮತ್ತು ಗ್ರಾಮೀಣ ಸ್ವಯಂ ಸೇವಕರು ಮತ್ತು "ನಾಡು ಮಾಸ್ಕೇರಿ ಗ್ರಾಮ ಪಂಚಾಯತಿಯ ಜಮೀನು ಅಭಿವೃದ್ಧಿ ಕಾಮಗಾರಿ ಎಂಬ ಲೇಖನಗಳು ಓದುಗರಲ್ಲಿ ಗ್ರಾಮ ನೈರ್ಮಲ್ಯ ಮತ್ತು ಉದ್ಯೋಗ ನಿಷ್ಠೆಯನ್ನು ಬಿಂಬಿಸಲು ಉಪಯುಕ್ತವಾಗಿವೆ. ಈ ಸಂಚಿಕೆಯಲ್ಲಿ ಸ್ಥಿರ ಶೀರ್ಷಿಕೆಗಳಾದ ಡಾ॥ ಪುಟ್ಟಪ್ಪನವರ ಬದುಕುವ ಮಾತು ಹಾಗೂ ಕವಿಯಕ್ಷ ಪ್ರಶ್ನೆ ಅಂಕಣದ ಬರಹಗಳು ಪ್ರಕಟವಾಗಿದ್ದರೆ ಪತ್ರಿಕೆಗೆ ಹೆಚ್ಚಿನ ಕಳೆ ಬರುತಿತ್ತು. ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸಲು ಕರ್ನಾಟಕ ವಿಕಾಸ ಪತ್ರಿಕೆ ಸನ್ನದ್ಧವಾಗಿದೆ.

**ಬಸವರಾಜ ಹೂಗಾರ,**
ಹಿರೇಸಿಂಗನಗುತ್ತಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಪಿನ್–587 154

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಮುಖಪುಟದೊಂದಿಗೆ ಮುದ್ರಣಗೊಂಡ ಮೇ–2013ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಆಕರ್ಷಕವಾಗಿ ಮುದ್ರಣಗೊಂಡಿದೆ. ಸಚಿವಾಲಯದಿಂದ ಸಂದೇಶದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕುರಿತು ವಿವರವಾದ ಮಾಹಿತಿಯನ್ನು ನೀಡಿ ಗ್ರಾಮೀಣ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಗ್ರಾಮೀಣ ಭಾಗದ ಜನರಿಗೆ ಉಪಯುಕ್ತವಾದ ಲೇಖನಗಳನ್ನು, ಮಾಹಿತಿಗಳನ್ನು ಮುಂಬರುವ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕೋರುತ್ತೇನೆ.

**ಶ್ರೀ ಜನಾರ್ಧನ್ ಪಟೇಗಾರ**
ಚನ್ನಟಪ್ಪಟಣ ತಾಲ್ಲೂಕು ರಾಮನಗರ ಜಿಲ್ಲೆ.

ಮೇ–2013ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಗ್ರಾಮೀಣ ಜನರ ಅಚ್ಚುಮೆಚ್ಚಿನ ಪತ್ರಿಕೆಯಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಯಶೋಗಾಥೆಗಳು, ಲೇಖನಗಳು ಜನರಿಗೆ ಮಾರ್ಗದರ್ಶನ ನೀಡುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಸರ್ಕಾರವು ಉದ್ಯೋಗ ಖಾತರಿ ಯೋಜನೆಯ ಕುರಿತು ಮಾಹಿತಿ ಪಡೆಯಲು ಉಚಿತ ಸಹಾಯವಾಣಿಯನ್ನು ಆರಂಭಿಸಿರುವುದು ಎಲ್ಲರಿಗೂ ಹರ್ಷತರುವಂತಹ ಸಂಗತಿಯಾಗಿದೆ. ಸ್ಥಿರ ಶೀರ್ಷಿಕೆಗಳಾದ ಕಾವ್ಯ ವಿಕಾಸ, ಕವಿಯಕ್ಷ ಪ್ರಶ್ನೆ, ಬದುಕುವ ಮಾತು ಅಂಕಣಗಳು ಮುದ್ರಣಗೊಂಡಿದ್ದರೆ ಪತ್ರಿಕೆಯ ಅಂದ ಇನ್ನೂ ಹೆಚ್ಚಾಗುತ್ತಿತ್ತು.

**ಶ್ರೀ ಬಸನಗೌಡ ಬಿ. ಪಾಟೀಲ್,**
ಪ್ರಥಮ ದರ್ಜೆ ಸಹಾಯಕರು, ತಹಸಿಲ್ದಾರರ ಕಛೇರಿ
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ

# ಪರಿಚಯ



**ಸಿದ್ದರಾಮಯ್ಯ**

ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಶ್ರೀ ಸಿದ್ದರಾಮಯ್ಯನವರು ಮೈಸೂರು ತಾಲ್ಲೂಕಿನ ವರುಣಾ ಹೋಬಳಿಯ ಸಿದ್ದರಾಮನ ಹುಂಡಿ ಗ್ರಾಮದಲ್ಲಿ ಸಿದ್ದರಾಮೇಗೌಡ ಹಾಗೂ ಬೋರಮ್ಮ ದಂಪತಿಗಳ ಮಗನಾಗಿ 1948ರ ಆಗಸ್ಟ್ 12 ರಂದು ಜನಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟೂರಲ್ಲಿ ಪೂರೈಸಿ ಬಿ.ಎಸ್‌ಸಿ ಪದವಿಯ ನಂತರ ಕಾನೂನು ಪದವಿಯನ್ನು ಪಡೆದು ಕೆಲಕಾಲ ವಕೀಲರಾಗಿ ಮೈಸೂರಿನಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ.

ತಾಲ್ಲೂಕು ಬೋರ್ಡ್ ಚುನಾವಣೆ ಮೂಲಕ ರಾಜಕೀಯ ಕ್ಷೇತ್ರಕ್ಕೆ 1978ರಲ್ಲಿ ಪಾದಾರ್ಪಣೆ ಮಾಡಿ ಸಾರ್ವಜನಿಕ ಸೇವೆ ಆರಂಭಿಸಿದರು. ಸ್ವತಂತ್ರ ಅಭ್ಯರ್ಥಿಯಾಗಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಿಂದ 1983ರಲ್ಲಿ ವಿಧಾನಸಭೆ ಪ್ರವೇಶ ಮಾಡಿದರು. 1984ರಲ್ಲಿ ರೇಷ್ಮೆ, ಪಶುಸಂಗೋಪನಾ, ಸಾರಿಗೆ, ಹಣಕಾಸು ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. 1996ರಲ್ಲಿ ಉಪ ಮುಖ್ಯಮಂತ್ರಿಯಾಗಿ, ಕಾರ್ಮಿಕ, ಯೋಜನೆ, ಹಣಕಾಸು ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿ ಮತ್ತೊಮ್ಮೆ 2004ರಲ್ಲಿ ಉಪ ಮುಖ್ಯಮಂತ್ರಿಯಾಗಿ ಹಣಕಾಸು, ಅಬಕಾರಿ ಖಾತೆಗಳೊಂದಿಗೆ ಏಳು ಬಾರಿ ಜನಪರ ಬಜೆಟ್ಟನ್ನು ಮಂಡಿಸಿ ರಾಜಕೀಯ ಮತ್ತು ಆರ್ಥಿಕ ಪರಿಣತರಿಂದ ಮೆಚ್ಚುಗೆ ಪಡೆದಿರುತ್ತಾರೆ.

ಇತ್ತೀಚೆಗೆ ನಡೆದ 14ನೇ ವಿಧಾನ ಸಭಾ ಚುನಾವಣೆಯಲ್ಲಿ ಮೈಸೂರು ತಾಲ್ಲೂಕಿನ ವರುಣಾ ವಿಧಾನ ಸಭಾ ಕ್ಷೇತ್ರದಿಂದ ಬಹುಮತದಿಂದ ಚುನಾಯಿತರಾಗಿ ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬರುವಲ್ಲಿ ಕಾರಣೀಭೂತರಾಗಿರುತ್ತಾರೆ.

ಗ್ರಾಮೀಣ ಪ್ರದೇಶದ ಜನರ ಸಂಕಷ್ಟಗಳು, ಬಡತನ ಮತ್ತು ಬವಣೆಗಳನ್ನು ರೈತಾಪಿ ಹಿನ್ನೆಲೆಯ ಶ್ರೀ ಸಿದ್ದರಾಮಯ್ಯನವರು ಬಹುವಾಗಿ ಅರಿತಿದ್ದು, ಯಾವಾಗಲೂ ಹಿಂದುಳಿದವರು, ನೊಂದವರ ಬಗ್ಗೆ ವಿಶೇಷ ಕಾಳಜಿ ವಹಿಸುವುದಲ್ಲದೇ ಅವರ ಸಮಸ್ಯೆಗಳ ಪರಿಹಾರದತ್ತ ಸದಾ ನೆರವಾಗುತ್ತಾ ಬಂದಿದ್ದಾರೆ. ಈ ಎಲ್ಲಾ ಸೇವಾ ಮನೋಭಾವದ ಹೋರಾಟದ ಫಲವೇ ಸನ್ಮಾನ್ಯರನ್ನು ರಾಜ್ಯದ ಮುಖ್ಯಮಂತ್ರಿಯ ಪಟ್ಟಕೇರಿಸಿದೆ ಎಂದರೆ ತಪ್ಪಾಗಲಾರದು.

ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರಿಗೆ ಅವರ ಸಂಪುಟದ ಸಹೋದ್ಯೋಗಿಗಳಿಗೆ ಹಾಗೂ ರಾಜ್ಯದ ಎಲ್ಲಾ ವಿಧಾನ ಸಭಾ ಸದಸ್ಯರುಗಳಿಗೆ ಈ ಸುಸಂದರ್ಭದಲ್ಲಿ ಶುಭ ಮತ್ತು ಯಶಸ್ಸನ್ನು ಕೋರುತ್ತಾ, ಇವರುಗಳ ಅವಧಿಯಲ್ಲಿ ರಾಜ್ಯವು ಸರ್ವತೋಮುಖ ಅಭಿವೃದ್ಧಿ ಹೊಂದಲಿ ಎಂದು "ಕರ್ನಾಟಕ ವಿಕಾಸ" ಹಾರೈಸುತ್ತದೆ.

# ಪರಿಚಯ



**ಹೆಚ್.ಕೆ. ಪಾಟೀಲರು**
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಗದಗ ಜಿಲ್ಲೆಯ ಹುಲಕೋಟಿಯಲ್ಲಿ ಆಗಸ್ಟ್ 15, 1953ರಂದು ಜನಿಸಿದ ಶ್ರೀ ಹೆಚ್.ಕೆ.ಪಾಟೀಲರು ಬಿ.ಎಸ್ಸಿ, ಎಲ್.ಎಲ್.ಬಿ ಪದವೀಧರರು. ಪ್ರಸಕ್ತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಸನ್ಮಾನ್ಯರಾದ ಶ್ರೀ ಎಚ್.ಕೆ. ಪಾಟೀಲರು ರಾಜಕೀಯ ಕ್ಷೇತ್ರದಲ್ಲಿ ಸುಮಾರು ಮೂರು ದಶಕಗಳಿಗೂ ಅಧಿಕವಾದ ಅಪಾರ ಅನುಭವವನ್ನು ಹೊಂದಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿನದಾಗಿ ಕಾರ್ಯನಿರ್ವಹಿಸಿ ಅಪಾರ ಅನುಭವ ಹೊಂದಿರುವ ಮಾನ್ಯರು ಅಧ್ಯಕ್ಷರಾಗಿ ವಿವಿಧ ಸಹಕಾರಿ ಸಂಸ್ಥೆಗಳ ಬಲವರ್ಧನೆಗೆ ಕಾರಣೀಭೂತರಾಗಿದ್ದಾರೆ. ಈ ಮೂಲಕ ಸಹಕಾರಿ ಧುರೀಣ ಎಂದೇ ಖ್ಯಾತರಾಗಿರುವ ಮಾನ್ಯರು ಜವಳಿ, ಆಹಾರ ಸಂಸ್ಕರಣೆ, ಜಲ ಸಂಪನ್ಮೂಲ, ಕೃಷಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿಯೂ ಸಹ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ವಿಧಾನ ಪರಿಷತ್ತಿಗೆ ಪದವೀಧರರ ಕ್ಷೇತ್ರದಿಂದ ನಾಲ್ಕು ಬಾರಿ ಆಯ್ಕೆಯಾಗಿದ್ದಾರೆ (1994 ರಿಂದ ಜೂನ್ 2008). ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಗ್ರಾಮೀಣ ಪ್ರದೇಶ ಹಿನ್ನೆಲೆಯುಳ್ಳ ಶ್ರೀಯುತರಿಗೆ ಬಡಜನರ ಕಷ್ಟ ಕಾರ್ಪಣ್ಯಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಅಪಾರ ಕಾಳಜಿ ವಹಿಸಿರುತ್ತಾರೆ. ಶುದ್ಧ ಕುಡಿಯುವ ನೀರು ಜನಾಂದೋಲನದ ಮೂಲಕ ಉತ್ತರ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿದ್ದು, ಕೇಂದ್ರ ಸರ್ಕಾರವು ಸಹ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಇದೇ ಮಾದರಿಯನ್ನು ರಾಷ್ಟ್ರವ್ಯಾಪಿ ವಿಸ್ತರಿಸಲು ಚಿಂತನೆ ನಡೆಸಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಆಸಕ್ತರಾಗಿರುವ ಶ್ರೀಯುತರು ಪುಸ್ತಕ ಪ್ರೇಮಿಯೂ ಹೌದು. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಹಲವಾರು ಪುಸ್ತಕಗಳನ್ನು ಲೇಖಕರಾಗಿ ಹೊರತಂದಿದ್ದಾರೆ. ಅದರಲ್ಲೂ ವಿಶೇಷವಾಗಿ ಸಹಕಾರ, ನೀರಾವರಿ ಮತ್ತು ನದಿ ನೀರು ಹಂಚಿಕೆ ವ್ಯಾಜ್ಯಗಳ ಬಗ್ಗೆ ಹಲವಾರು ಲೇಖನಗಳನ್ನು ಕಾಲಕಾಲಕ್ಕೆ ಪ್ರಕಟಿಸಿದ್ದಾರೆ.

ಮಾನ್ಯರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಈ ಶುಭ ಸಂದರ್ಭದಲ್ಲಿ, ಅವರಿಗೆ ಯಶಸ್ಸು ಮತ್ತು ಶುಭವನ್ನು ಕೋರುತ್ತಾ 'ಕರ್ನಾಟಕ ವಿಕಾಸ' ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

# ಪರಿಚಯ



**ಟಿ.ಎಂ.ವಿಜಯ ಭಾಸ್ಕರ್.** ಭಾ.ಆ.ಸೇ.

ಸರ್ಕಾರದ ಪ್ರಧಾನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಟಿ.ಎಮ್.ವಿಜಯ ಭಾಸ್ಕರ್ ಅವರು ಮೂಲತಃ ಕರ್ನಾಟಕ ರಾಜ್ಯದವರಾಗಿದ್ದು, 1983ರಲ್ಲಿ ಭಾರತೀಯ ಆಡಳಿತ ಸೇವೆಗೆ ಸೇರ್ಪಡೆಗೊಂಡಿರುತ್ತಾರೆ. ಕನ್ನಡ, ತೆಲುಗು, ತಮಿಳು, ಫ್ರೆಂಚ್ ಹಾಗೂ ಹಿಂದಿ ಭಾಷೆಯನ್ನು ಬಲ್ಲ ಬಹುಭಾಷಾ ಪಾಂಡಿತ್ಯವನ್ನು ಹೊಂದಿದ್ದು ಸ್ನಾತಕೋತ್ತರ ಪದವಿಯನ್ನು ಸಹ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಗೊಂಡಿರುತ್ತಾರೆ. ನಂತರ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದಲ್ಲಿ ಎಂ.ಬಿ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಆಡಳಿತ ಕ್ಷೇತ್ರದಲ್ಲಿ ಅಪಾರ ಅನುಭವವನ್ನು ಹೊಂದಿರುವ ಶ್ರೀಯುತರು ಮೊದಲಿಗೆ ಕೊಪ್ಪಳ ಜಿಲ್ಲೆಯಲ್ಲಿ ಉಪ ವಿಭಾಗದ ಅಧಿಕಾರಿಗಳಾಗಿ ತಮ್ಮ ಈ ಸೇವೆಯನ್ನು ಪ್ರಾರಂಭಿಸಿರುತ್ತಾರೆ. ಬಿಜಾಪುರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಲವಾರು ಉನ್ನತ ಹುದ್ದೆಗಳನ್ನು ನಿರ್ವಹಿಸುತ್ತಾ ಬಂದಿರುವ ಶ್ರೀಯುತರಿಗೆ ನಮ್ಮ ಗ್ರಾಮೀಣ ಪ್ರದೇಶದ ಬಡ ಜನರ ಪರಿಪಾಟಲುಗಳ ಬಗ್ಗೆ ಸ್ಪಷ್ಟ ಚಿತ್ರಣದ ಅರಿವಿದೆ. ಈ ಹಿನ್ನೆಲೆಯೊಂದಿಗೆ ಪ್ರಸಕ್ತ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಡಳಿತದ ಚುಕ್ಕಾಣಿಯನ್ನು ಹಿಡಿದಿರುವ ಈ ಶುಭ ಸಂದರ್ಭದಲ್ಲಿ "ಕರ್ನಾಟಕ ವಿಕಾಸ" ಶ್ರೀಯುತರಿಗೆ ಯಶಸ್ಸನ್ನು ಕೋರುತ್ತಾ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

## ಸಚಿವಾಲಯದಿಂದ
# ಸಂದೇಶ

**ಕರ್ನಾಟಕ ಸರ್ಕಾರ ಸಚಿವಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ,**
**ಬಹುಮಹಡಿ ಕಟ್ಟಡ, ಬೆಂಗಳೂರು.**



**ಟಿ.ಎಂ.ವಿಜಯ ಭಾಸ್ಕರ್.** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಪ್ರಿಯ ಬಂಧುಗಳೇ,

### ಸಹಕಾರ ಮತ್ತು ಸೇವಾ ಮನೋಭಾವವಿರಲಿ.......

ಗ್ರಾಮೀಣ ಪ್ರದೇಶದ ಸರ್ವತೋಮುಖ ಏಳ್ಗೆಗಾಗಿ ಬಡಜನರ, ಹಿಂದುಳಿದ ವರ್ಗದವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಲವಾರು ಮಹತ್ವಾಕಾಂಕ್ಷಿ ಜನಪರ ಯೋಜನೆಗಳನ್ನು ರೂಪಿಸಿ, ಅನುದಾನಗಳನ್ನು ನೀಡಿ ನಿಗದಿತ ಕಾಲಮಿತಿಯಲ್ಲಿ ಯಶಸ್ವಿಯಾಗಿ ಜಾರಿಗೆ ತರುವ ಕೆಲಸವನ್ನು ಮೂರು ಹಂತದ ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗಿದೆ.

ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ, ಸಂಬಂಧಿಸಿದ ಅನುದಾನಗಳನ್ನು ಪಾರದರ್ಶಕತೆಯೊಂದಿಗೆ ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕಾಗಿರುತ್ತದೆ. ಹಾಗಾದಾಗ ಯೋಜನೆಗಳ ಫಲಶ್ರುತಿ ನಿಜವಾದ ಫಲಾನುಭವಿಗಳಿಗೆ ತಲುಪುವಂತಾಗುತ್ತದೆ. ಇದಕ್ಕೆ ಪಂಚಾಯತ್ ರಾಜ್ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಅಧಿಕಾರಿ/ಸಿಬ್ಬಂದಿ ವರ್ಗದವರು ಸೇವಾ ಮನೋಭಾವದಿಂದ ಹಾಗೂ ಸ್ಪಂದನಾಶೀಲರಾಗಿ ಬಡ ಗ್ರಾಮೀಣ ಜನರ ಸಂಕಷ್ಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಸರ್ಕಾರದ ನೀತಿ ನಿಯಮಾವಳಿಗೆ ತಕ್ಕಂತೆ ಮಾನವೀಯತೆಯಿಂದಲೂ ಸಹ ಕಾರ್ಯನಿರ್ವಹಿಸಬೇಕು.

### ಮೂಲಭೂತ ಸೌಕರ್ಯಗಳಿಗೆ ಪ್ರಾಶಸ್ತ್ಯವಿರಲಿ . . . .

ಗ್ರಾಮೀಣ ಪ್ರದೇಶದಲ್ಲಿ ಜನರ ಅಗತ್ಯ ಮೂಲಭೂತ ಸೌಕರ್ಯಗಳಾದ ಶುದ್ಧ ಕುಡಿಯುವ ನೀರಿನ ಸಮರ್ಪಕ ಪೂರೈಕೆ, ಉತ್ತಮ ಪರಿಸರ ನಿರ್ಮಿಸುವ

ನೈರ್ಮಲ್ಯ ಕಾರ್ಯಕ್ರಮಗಳು, ಅಭಿವೃದ್ಧಿಗೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ಸೇತುವೆ ನಿರ್ಮಾಣ, ಬರ ನಿರ್ವಹಣೆಯ ಜಲ ಸಂರಕ್ಷಣೆ ಕಾರ್ಯಕ್ರಮಗಳಿಗೆ ಯಾವತ್ತೂ ಆದ್ಯತೆಯ ಮೇಲೆ ಕೆಲಸ ನಿರ್ವಹಿಸಬೇಕು. ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಜನ ಜಾನುವಾರುಗಳು ಪರಿತಪಿಸುವಂತಹ ಸಂಕಷ್ಟವನ್ನು ನಾವು ಸಮರ್ಪಕವಾಗಿ ಎದುರಿಸಬೇಕಿದೆ.

**ಕುಡಿಯವ ನೀರಿಗೆ ಆದ್ಯತೆಯಿರಲಿ. . . .**

ಕುಡಿಯವ ನೀರಿನ ಸರಬರಾಜಿಗಾಗಿ ಸರ್ಕಾರವು ಈಗಾಗಲೇ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಬೇಸಿಗೆಯ ದಿನಗಳಲ್ಲಿ ಗ್ರಾಮೀಣ ಜನತೆಗೆ ಶುದ್ದ ಕುಡಿಯುವ ನೀರು ಸಮರ್ಪಕವಾಗಿ ತಲುಪಿದಾಗಲೇ ಯೋಜನೆಗಳ ಅನುಷ್ಠಾನಕ್ಕೆ ಒಂದು ಅರ್ಥ ಬರುತ್ತದೆ. ಯೋಜನೆಗಳ ಜಾರಿಯಲ್ಲಿ ಎಲ್ಲೂ ಲೋಪವಾಗದಂತೆ ಎಚ್ಚರ ವಹಿಸಬೇಕಾಗಿರುತ್ತದೆ. ಅನಗತ್ಯ ನೀರು ಬಳಕೆಯನ್ನು ತಡೆಯುವುದು, ಜಲಮೂಲಗಳನ್ನು ಕಲುಷಿತಗೊಳಿಸದಂತೆ ನೋಡಿಕೊಳ್ಳುವುದು. ಪಂಚಾಯತ್ ರಾಜ್ ಸಂಸ್ಥೆಯ ಪ್ರತಿನಿಧಿಗಳು ಹಾಗೂ ಅಧಿಕಾರಿ/ಸಿಬ್ಬಂದಿ ಈ ನಿಟ್ಟಿನಲ್ಲಿ ಗ್ರಾಮೀಣ ಜನರ ಸಂಕಷ್ಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಕಾರ್ಯನಿರ್ವಹಿಸಲು ಕೋರುತ್ತೇನೆ.

**(ಟಿ.ಎಂ.ವಿಜಯ ಭಾಸ್ಕರ್)**

ಯಶೋಗಾಥೆ

# ಹೊಸಂಗಡಿ ಗ್ರಾಮ ಪಂಚಾಯತ್

**ದಕ್ಷಿಣ ಕನ್ನಡ ಜಿಲ್ಲೆ ಹೊಸಂಗಡಿ ಗ್ರಾ.ಪಂ ವ್ಯಾಪ್ತಿಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಒಂದು ಕಿರು ಚಿತ್ರಣ**

ಹಚ್ಚ ಹಸಿರಿನ ನಿಸರ್ಗ ಸೌಂದರ್ಯ ತಾಣವಾಗಿರುವ ದ.ಕ. ಜಿಲ್ಲೆಯು ಬೆಳ್ತಂಗಡಿ ತಾಲೂಕಿನ ಹೊಸಂಗಡಿ ಗ್ರಾಮ ಪಂಚಾಯತ್ ಹೊಸಂಗಡಿ ಮತ್ತು ಬಡಕೋಡಿ ಗ್ರಾಮಗಳನ್ನೊಳಗೊಂಡಿದೆ. ಬೆಳ್ತಂಗಡಿ ತಾಲೂಕು ಕೇಂದ್ರದಿಂದ 26 ಕಿ.ಮೀ. ದೂರದಲ್ಲಿರುವ ಈ ಗ್ರಾಮ ಪಂಚಾಯತ್‌ನಲ್ಲಿ 2001 ರ ಜನಗಣತಿ ಪ್ರಕಾರ 4402 ಜನಸಂಖ್ಯೆ ಇದ್ದು, 1644 ಚ.ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದೆ. ಉತ್ಸಾಹಿ ತರುಣ – ತರುಣಿಯರನ್ನು ಒಳಗೊಂಡ ಯುವಕ ಮಂಡಲ, ಯುವತಿ ಮಂಡಲಗಳು, ಮಹಿಳಾ ಮಂಡಲಗಳು, ಕ್ರಿಯಾಶೀಲ ಸಂಘಟನೆಗಳು ಗ್ರಾಮ ಪಂಚಾಯತ್‌ನೊಂದಿಗೆ ಸಹಭಾಗಿಗಳಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಂಪೂರ್ಣ ನೈರ್ಮಲ್ಯವನ್ನು ಸಾಧಿಸಿ, ನೈರ್ಮಲ್ಯದ ಸುಸ್ಥಿರತೆಯನ್ನು ಕಾಪಾಡಿಕೊಂಡು ಬಂದು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೂ ಮಾದರಿ ಎನಿಸಿಕೊಂಡಿದೆ.

ಬಯಲು ಶೌಚಾಲಯದಿಂದ ಮುಕ್ತಗೊಂಡ ಈ ಗ್ರಾಮ ಪಂಚಾಯತ್ ರಾಷ್ಟ್ರಮಟ್ಟದ ನಿರ್ಮಲ ಗ್ರಾಮ ಪುರಸ್ಕಾರಕ್ಕಾಗಿ ಪಾತ್ರವಾಗಿರುವುದಲ್ಲದೆ 2010–11ನೇ ಸಾಲಿನಲ್ಲಿ ರಾಜ್ಯದ ಅತ್ಯುತ್ತಮ ಗ್ರಾಮ ಪಂಚಾಯತಿಯಾಗಿ ರಾಜ್ಯ ಮಟ್ಟದ ನೈರ್ಮಲ್ಯ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

## ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆ

ಹೊಸಂಗಡಿ ಗ್ರಾಮ ಪಂಚಾಯತ್‌ನಲ್ಲಿ 946 ಕುಟುಂಬಗಳಿದ್ದು, 469 ಕುಟುಂಬಗಳು ಗ್ರಾಮ ಪಂಚಾಯತ್‌ನಿಂದ ವೈಯಕ್ತಿಕ ನಲ್ಲಿ ನೀರಿನ ಸಂಪರ್ಕವನ್ನು ಪಡೆದಿರುತ್ತಾರೆ. ಈ 469 ಕುಟುಂಬಗಳಿಗೆ 7 ಕೊಳವೆ ನೀರು ಸರಬರಾಜು ಯೋಜನೆ ಮತ್ತು ಒಂದು ನಲ್ಲಿ ನೀರು ಸರಬರಾಜು ಯೋಜನೆಯಿಂದ ನೀರನ್ನು ಪೂರೈಸಲಾಗುತ್ತಿದ್ದು, ಇದಕ್ಕಾಗಿ 1 ನೆಲಮಟ್ಟದ ನೀರು ಸಂಗ್ರಹಣಾ ಟ್ಯಾಂಕ್ ಮತ್ತು 5 ಮೇಲ್ಮಟ್ಟದ ನೀರು ಸಂಗ್ರಹಣಾ ಟ್ಯಾಂಕನ್ನು ನಿರ್ಮಿಸಲಾಗಿದೆ.

ಗ್ರಾ.ಪಂ ನಿಂದ ವೈಯಕ್ತಿಕ ನಲ್ಲಿ ನೀರು ಸಂಪರ್ಕ ಕಲ್ಪಿಸಿರುವ ಎಲ್ಲಾ 469 ಸಂಪರ್ಕಗಳಿಗೂ ಮೀಟರನ್ನು ಅಳವಡಿಸಲಾಗಿದೆ. ಈ ಮೀಟರುಗಳ ಸಹಾಯದಿಂದ ಪ್ರತಿಯೊಂದು ನಲ್ಲಿ ನೀರು ಸಂಪರ್ಕದಿಂದ ಪ್ರತಿ ತಿಂಗಳು ಬಳಸುವ ನೀರಿನ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಅಲ್ಲದೆ ಬಳಕೆ ಮಾಡುವ ನೀರಿನ ಪ್ರಮಾಣಕ್ಕೆ ಸ್ಲಾಬ್ ವೈಸ್

ದರವನ್ನು ನಿಗದಿಪಡಿಸಿ ಗ್ರಾ.ಪಂ. ಸಾಮಾನ್ಯ ಸಭೆ ಅನುಮೋದನೆ ಪಡೆಯಲಾಗಿದೆ.

ವೈಯಕ್ತಿಕ ನಲ್ಲಿ ನೀರಿನ ಸಂಪರ್ಕವನ್ನು ಅಳವಡಿಸಿರುವ ಮೀಟರುಗಳಲ್ಲಿ (ಮಾಪಕ) ದಾಖಲಾದ ಬಳಕೆಯಾದ ನೀರಿನ ಪ್ರಮಾಣಕ್ಕೆ ಗ್ರಾ.ಪಂ. ನಿಂದ ನಿಗದಿಪಡಿಸಿರುವ ದರಕ್ಕೆ ಅನುಗುಣವಾಗಿ ಪಾವತಿಸಬೇಕಾದ ನೀರಿನ ಶುಲ್ಕವನ್ನು ಲೆಕ್ಕಚಾರ ಮಾಡಿ ಸ್ಥಳದಲ್ಲೇ ಬಿಲ್ಲನ್ನು ನೀಡುವ ವ್ಯವಸ್ಥೆಯಿರುವ ತಂತ್ರಾಂಶ ಹೊಂದಿರುವ ಸಿಂಪ್ಯೂಟರ್‌ನ್ನು ನೀರಿನ ಶುಲ್ಕ ವಸೂಲಿ ಮಾಡಲು ಬಳಸಲಾಗುತ್ತದೆ. ಈ ಸಿಂಪ್ಯೂಟರ್‌ನಲ್ಲಿ ಗ್ರಾ.ಪಂ. ವ್ಯಾಪ್ತಿಯಲ್ಲಿ ವೈಯಕ್ತಿಕ ನಲ್ಲಿ ನೀರು ಸಂಪರ್ಕ ಹೊಂದಿರುವ ಎಲ್ಲಾ ಫಲಾನುಭವಿಗಳ ವಿವರ, ಕುಡಿಯುವ ನೀರಿನ ಮೀಟರ್‌ನ ಆಧಾರದಲ್ಲಿ ನಿಗದಿಯಾದ ನೀರಿನ ಶುಲ್ಕ, ಫಲಾನುಭವಿ ಪಾವತಿಸಬೇಕಾದ ಶುಲ್ಕ, ಪಾವತಿಸಿದ ಶುಲ್ಕ, ಬಾಕಿ ಪಾವತಿಗೆ ಸಂಬಂಧಿಸಿದಂತೆ ದಾಖಲೆಗಳ ವಿವರಗಳಿರುತ್ತದೆ. ಅಲ್ಲದೆ ಈ ಸಿಂಪ್ಯೂಟರ್‌ನ್ನು ಗ್ರಾ.ಪಂ. ಕಛೇರಿಯಲ್ಲಿರುವ ಗಣಕ ಯಂತ್ರಕ್ಕೆ ಸಂಪರ್ಕ ಕಲ್ಪಿಸಿ ಸಿಂಪ್ಯೂಟರ್‌ಲ್ಲಿರುವ ಎಲ್ಲಾ ವಿವರಗಳನ್ನು ಗಣಕ ಯಂತ್ರದಲ್ಲಿ ಕೂಡಾ ಶೇಖರಿಸಿಡಬಹುದಾಗಿದೆ.

ಗ್ರಾ.ಪಂ. ನ ಸಿಬ್ಬಂದಿ / ಬಿಲ್ಲು ವಸೂಲಿಗಾರ ತಿಂಗಳಿನ ಮೊದಲ ವಾರದಲ್ಲಿ ನಲ್ಲಿ ನೀರಿನ ಸಂಪರ್ಕ ಹೊಂದಿರುವ ಪ್ರತಿ ಮನೆಗೆ ಭೇಟಿ ನೀಡಿ ನೀರಿನ ಮೀಟರಿನಲ್ಲಿರುವ ಮಾಪನವನ್ನು ಸಿಂಪ್ಯೂಟರ್‌ನಲ್ಲಿ ದಾಖಲಿಸಿ ಫಲಾನುಭವಿಗೆ ಸ್ಥಳದಲ್ಲೇ ನೀರಿನ ಶುಲ್ಕ ನಮೂದಿಸಿದ ಬಿಲ್ಲನ್ನು ನೀಡುತ್ತಿದ್ದಾರೆ. ಹೆಚ್ಚಿನ ಫಲಾನುಭವಿಗಳು ಸ್ಥಳದಲ್ಲೇ ನೀರಿನ ಶುಲ್ಕ ಪಾವತಿಸುತ್ತಿದ್ದು, ತಕ್ಷಣ ಸಿಂಪ್ಯೂಟರ್‌ನಿಂದ ಹಣ ಪಾವತಿಸಿದ ಬಗ್ಗೆ ರಶೀದಿಯನ್ನು ಕೂಡಾ ಅಲ್ಲೇ ನೀಡಲಾಗುತ್ತಿದೆ. ಸ್ಥಳದಲ್ಲಿ ಹಣ ಪಾವತಿಸದ ಫಲಾನುಭವಿಗಳು ಗ್ರಾ.ಪಂ. ನಿಗದಿಪಡಿಸಿದ ಅವಧಿಗಿಂತ ಮುಂಚಿತವಾಗಿ ಗ್ರಾ.ಪಂ. ಕಛೇರಿಗೆ ಬಂದು ನೀರಿನ ಶುಲ್ಕವನ್ನು ಪಾವತಿಸುತ್ತಿದ್ದಾರೆ.

2011-12ನೇ ಸಾಲಿನಲ್ಲಿ ಗ್ರಾ.ಪಂ. ಗೆ ಕುಡಿಯುವ ನೀರಿನ ತಿಂಗಳ ಶುಲ್ಕ, ಸಂಪರ್ಕ ಶುಲ್ಕ, ಬಡ್ಡಿ ಸೇರಿ ಒಟ್ಟು ರೂ. 4.4 ಲಕ್ಷ ಜಮೆಯಾಗಿದ್ದು, ಮೆಸ್ಕಾಂ ವಿದ್ಯುತ್ ಬಿಲ್ಲು, ಪಂಪ್ ಆಪರೇಟರ್‌ಗಳ ತಿಂಗಳ ಸಂಬಳ, ಗೌರವಧನ, ಪಂಪು ದುರಸ್ತಿ, ಇತರ ನಿರ್ವಹಣೆ ಸೇರಿ ಒಟ್ಟು ರೂ. 3.13 ಲಕ್ಷ ವೆಚ್ಚವಾಗಿರುತ್ತದೆ. ಒಟ್ಟಾರೆಯಾಗಿ ಗ್ರಾ.ಪಂ. ಗೆ ನೀರಿನ ನಿರ್ವಹಣೆಯಲ್ಲಿ ರೂ. 1.28 ಲಕ್ಷ ಉಳಿಕೆಯಾಗಿರುತ್ತದೆ. ನೀರಿನ ಮತ್ತು ದಾರಿದೀಪಗಳ ವಿದ್ಯುತ್ ಬಿಲ್‌ಗೆ ಸಂಬಂಧಿಸಿದಂತೆ ರಾಜ್ಯದ ಹೆಚ್ಚಿನ ಎಲ್ಲಾ ಗ್ರಾ.ಪಂ. ಗಳು ಲಕ್ಷ ಲಕ್ಷ ಮೊತ್ತ ಮೆಸ್ಕಾಂಗೆ ಪಾವತಿಸಲು ಬಾಕಿ ಇರುವಾಗ ಮೆಸ್ಕಾಂಗೆ ಯಾವುದೇ ಮೊತ್ತ ಪಾವತಿಸಲು ಬಾಕಿ ಉಳಿಸದೆ ಹೊಸಂಗಡಿ ಗ್ರಾ.ಪಂ. ರಾಜ್ಯಕ್ಕೆ ಮಾದರಿಯಾಗಿದೆ.

### ಕಾರ್ಯಾಚರಣೆ ಮತ್ತು ನಿರ್ವಹಣೆ (2011-12)

| ಆದಾಯ | | ಖರ್ಚು | |
|---|---|---|---|
| ನೀರಿನ ತೆರಿಗೆ | 4,12,927 | ಮೆಸ್ಕಾಂ ವಿದ್ಯುತ್ ಬಿಲ್ | 2,01,357 |
| ಸಂಪರ್ಕ ಶುಲ್ಕ | 27,700 | ಪಂಪ್ ಆಪರೇಟರ್ ಸಂಬಳ | 38,958 |
| ಬ್ಯಾಂಕ್ ಬಡ್ಡಿ | 1,397 | ದುರಸ್ತಿಗಳು | 72,440 |
| ಒಟ್ಟು | **4,40,677** | ಒಟ್ಟು | **3,12,755** |

### ಮೊಬೈಲ್ ನಿಂದ ಕುಡಿಯುವ ನೀರಿನ ಯೋಜನೆಯ ಮೋಟರ್ ನಿರ್ವಹಣೆ

ಕುಡಿಯುವ ನೀರಿನ ಯೋಜನೆಯ ಕೊಳವೆ ಬಾವಿಗಳಿಂದ ದಿನ ನಿತ್ಯ ಮೋಟರ್‌ನಿಂದ ಎತ್ತುವರಿ ಕೊಳವೆ ಮೂಲಕ ನೀರನ್ನು ನೆಲಮಟ್ಟದ ಅಥವಾ ಮೇಲ್ಮಟ್ಟದ ನೀರು ಸಂಗ್ರಹಣಾ ತೊಟ್ಟಿಗೆ ತುಂಬಿಸಲಾಗುತ್ತದೆ. ಈ ಮೋಟರನ್ನು ಚಾಲನೆ ಮಾಡಿಸುವುದು ಮತ್ತು ನೀರು ಟ್ಯಾಂಕ್‌ನಲ್ಲಿ ತುಂಬಿದ ನಂತರ ನಿಲ್ಲಿಸುವುದು ಪಂಪ್ ಆಪರೇಟರ್/ ಚಾಲಕರ ದಿನನಿತ್ಯದ ಕೆಲಸವಾಗಿರುತ್ತದೆ.

ಅವರು ಪಂಪು ಚಾಲನೆ / ನಿಲ್ಲಿಸಲು ಕುಡಿಯುವ ನೀರಿನ ಸ್ಥಾವರದ ಬಳಿ ಹೋಗಬೇಕಾಗುತ್ತದೆ. ಕುಡಿಯುವ ನೀರಿನ ಸ್ಥಾವರದ ಬಳಿ ಹೋಗದೆಯೇ ಕೇವಲ ಮೊಬೈಲ್‌ನಿಂದ ಮೋಟರನ್ನು ಆರಂಭಿಸಲು ಯಾ ನಿಲ್ಲಿಸಲು ಸಾಧ್ಯವೆಂದು ಹೊಸಂಗಡಿ ಗ್ರಾ.ಪಂ. ಕಿಸಾನ್ ಶಕ್ತಿ ಮೂಲಕ ನಿರೂಪಿಸಿ ಕೊಟ್ಟಿದೆ.

ನೀರಿನ ಸಂಗ್ರಹಣಾ ಟ್ಯಾಂಕ್‌ನ ಗಾತ್ರದ ಆಧಾರದಲ್ಲಿ ಟ್ಯಾಂಕ್ ನೀರು ತುಂಬಲು ಇರುವ ಸಮಯ ಲೆಕ್ಕ ಹಾಕಿ ಅದನ್ನು ಮೊಬೈಲ್‌ನಲ್ಲಿ ಫೀಡ್ ಮಾಡಿದ್ದಲ್ಲಿ ಚಾಲನೆಯಲ್ಲಿದ್ದ ಮೋಟರ್ ಅಷ್ಟೇ ಸಮಯಕ್ಕೆ ನಿಲುಗಡೆಯಾಗುತ್ತದೆ. ಇದರಿಂದ ಟ್ಯಾಂಕ್ ತುಂಬಿ ಪೋಲಾಗುತ್ತಿರುವ ನೀರನ್ನು ತಡೆಗಟ್ಟಬಹುದು. ಮೋಟರ್ ಚಾಲನೆಯಲ್ಲಿದ್ದಾಗ ವಿದ್ಯುತ್ ಸಂಪರ್ಕ ನಿಂತು ಹೋದಲ್ಲಿ ಮೋಟರ್ ನಿಂತು ಹೋಗಿ ಆಪರೇಟರ್ ಮೊಬೈಲ್‌ಗೆ ಕರೆ ಬರುತ್ತದೆ. ಪುನ: ವಿದ್ಯುತ್ ಸಂಪರ್ಕ ಬಂದಲ್ಲಿ ಆಪರೇಟರ್‌ಗೆ ಮೊಬೈಲ್‌ಗೆ ಕರೆ ಬಂದು ಮೋಟರ್ ಚಾಲನೆ ಮಾಡಲು ಸೂಚಿಸುತ್ತದೆ. 3 ಫೇಸ್‌ನಲ್ಲಿ ಒಂದು ಫೇಸ್ ಇಲ್ಲದಿದ್ದರೆ, ಲೋ ವೋಲ್ಟೇಜ್ ಆದರೆ ಮೋಟರ್ ನಿಂತು ಹೋಗಿ ಆಪರೇಟರ್ ಮೊಬೈಲ್‌ಗೆ ಕರೆ ಬರುತ್ತದೆ. ಅಲ್ಲದೆ ಈ ವ್ಯವಸ್ಥೆ ನೀರಿನ ಮೋಟರನ್ನು ಹೈ ವೋಲ್ಟೇಜ್ ಮತ್ತು ಲೋ ವೋಲ್ಟೇಜ್‌ನಿಂದ ರಕ್ಷಿಸುತ್ತದೆ.

ಈ ವ್ಯವಸ್ಥೆಯಿಂದ ಒಂದು ಗ್ರಾ.ಪಂ. ನಲ್ಲಿ 4 ಅಥವಾ 5 ಸ್ಥಾವರಗಳ ನಿರ್ವಹಣೆಯನ್ನು ಒಬ್ಬನೇ ಪಂಪ್ ಆಪರೇಟರ್ ನಿರ್ವಹಿಸಬಹುದಾಗಿದ್ದು, ವೆಚ್ಚದಲ್ಲಿ ಮಿತವನ್ನು ಸಾಧಿಸಬಹುದಾಗಿದೆ. ವಿದ್ಯುತ್ ಸಂಪರ್ಕ ಕಡಿತ, ಲೋ ವೋಲ್ಟೇಜ್‌ಗಳಿಗೆ ಸಂಬಂಧಿಸಿದಂತೆ ಸ್ವಯಂಚಾಲಿತ ನಿಯಂತ್ರಣ ವ್ಯವಸ್ಥೆಯಿಂದ ಪಂಪಿನ ಮೋಟಾರ್‌ಗೆ ಹಾನಿಯಾಗುವುದನ್ನು ತಪ್ಪಿಸಬಹುದಾಗಿದೆ.

ಗ್ರಾ.ಪಂ., ಆಡಳಿತ ಮಂಡಳಿ, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಹಾಗೂ ಗ್ರಾ.ಪಂ. ವ್ಯಾಪ್ತಿಯ ಸಮಾನ ವಯಸ್ಕರ ತಂಡದೊಂದಿಗೆ "ಸ್ವಚ್ಛ ಗ್ರಾಮ ಆರೋಗ್ಯ ಧಾಮ" ಎಂಬ ಧ್ಯೇಯದೊಂದಿಗೆ ಪ್ಲಾಸ್ಟಿಕ್ ಮುಕ್ತ ಗ್ರಾಮದ ಗುರಿ ಸಾಧಿಸುವಲ್ಲಿ ಕಾರ್ಯೋನ್ಮುಖವಾಗಿದೆ.

ನೈರ್ಮಲೀಕರಣ ಮತ್ತು ಪ್ಲಾಸ್ಟಿಕ್ ನಿರ್ಮೂಲನದ ಬಗ್ಗೆ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮ, ಪ್ರಬಂಧ ಸ್ಪರ್ಧೆಗಳು, ಮಾಹಿತಿ ಕಾರ್ಯಾಗಾರಗಳು, ಮಹಿಳೆಯವರು ಮತ್ತು ಮಕ್ಕಳಿಗೆ ಆಪ್ತ ಸಮಾಲೋಚನೆ, ತಜ್ಞರಿಂದ ಮಾಹಿತಿ ಶಿಬಿರಗಳು, ಜಾನುವಾರುಗಳಿಗೆ ಲಸಿಕೆ ಕಾರ್ಯಕ್ರಮ, ಜನಸ್ಪಂದನ ಕಾರ್ಯಕ್ರಮ, ಮಾಹಿತಿ ಕರಪತ್ರಗಳು, ಗೋಡೆ ಬರಹಗಳು, ರಕ್ತದಾನ ಶಿಬಿರಗಳು, ಉಚಿತ ಆರೋಗ್ಯ ತಪಾಸಣಾ ಶಿಬಿರಗಳು, ಯಶಸ್ವಿ ವಾರ್ಡು ಸಭೆ ಮತ್ತು ಗ್ರಾಮ ಸಭೆ ಹೀಗೆ ಹತ್ತು ಹಲವು ಚಟುವಟಿಕೆಗಳಲ್ಲಿ ಗ್ರಾ.ಪಂ. ಗ್ರಾಮಸ್ಥರ ಸಹಕಾರದೊಂದಿಗೆ ನಡೆಸುತ್ತಾ ಬಂದಿದೆ.

ಹೊಸಂಗಡಿ ಗ್ರಾ.ಪಂ. ನ ಸಾಧನೆಯನ್ನು ಅಧ್ಯಯನ ನಡೆಸಲು / ವೀಕ್ಷಿಸಲು ನೆದರ್ಲ್ಯಾಂಡ್‌ನ ಗ್ರಾಮೀಣಾಭಿವೃದ್ಧಿ ತಂಡ, ಒರಿಸ್ಸಾದ ಗ್ರಾಮೀಣಾಭಿವೃದ್ಧಿ ಅಧ್ಯಯನ ತಂಡ, ಆಂಧ್ರಪ್ರದೇಶದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ ಅಧ್ಯಯನ ತಂಡ, ಕರ್ನಾಟಕ ಸರಕಾರದ ರಾಜ್ಯ ಮಟ್ಟದ ಅಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಭೇಟಿ ನೀಡಿ ಪ್ರಶಂಶಿಸಿದ್ದಾರೆ. ಹೀಗೆ ಹಲವಾರು ವೈವಿಧ್ಯಮಯ, ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳ ಮೂಲಕ ಹೊಸಂಗಡಿ ಗ್ರಾ.ಪಂ. ನ ಸಾಧನೆ ಸರ್ವರಿಗೂ ಅನುಕರಣೀಯವಾಗಿದೆ.

## ಯಶೋಗಾಥೆ

# ಶೈಕ್ಷಣಿಕ ಕ್ಷೇತ್ರದಲ್ಲಿ ಗ್ರಾಮ ಪಂಚಾಯತ ಠಾಣಾಕುಶನೂರಿನ ಹೆಮ್ಮೆಯ ಸಾಧನೆ

**ಶರತಕುಮಾರ ಎ.**

**ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಠಾಣಾಕುಶನೂರ ಗ್ರಾಮ ಪಂಚಾಯತಿಯು ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯ ಕಿರು ಚಿತ್ರಣ...**

"ಗ್ರಾಮ ಸ್ವರಾಜ" ಇದು ನಮ್ಮ ನಾಡಿನ ಹಳ್ಳಿಗಳ/ಗ್ರಾಮಗಳ ಅಭಿವೃದ್ಧಿಯ ಮಹಾದಾಸೆಯ ಪದ

ನಮ್ಮ ನಾಡಿನ/ದೇಶದ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಗ್ರಾಮ ಪಂಚಾಯತಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುವದು ಅತಿ ಜವಾಬ್ದಾರಿಯ ಕೆಲಸ; ಗ್ರಾಮ ಪಂಚಾಯತಿಗಳು ಜನರ ಜೀವನ ಗುಣಮಟ್ಟ ಸುಧಾರಣೆಗಾಗಿ ಬೇಡಿಕೆಗಳನ್ನು ಸಂಗ್ರಹಿಸುವದು, ಹೊಸ ಯೋಜನೆಗಳನ್ನು ರೂಪಿಸುವದು ಹಾಗೂ ಅವುಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸುವದು ಸೇರಿರುತ್ತದೆ. ನಮ್ಮ ರಾಜ್ಯದ ಗ್ರಾಮ ಪಂಚಾಯಿತಿಗಳು ಇಂದು ಅನೇಕ ಆವಿಷ್ಕಾರಿಕ ಯೋಜನೆಗಳ ಮೂಲಕ ಹೆಸರು ಮಾಡುತ್ತಿದ್ದು ಅಂಥದರಲ್ಲಿ ಬೀದರ ಜಿಲ್ಲೆಯ ಔರಾದ ತಾಲೂಕಿನ ಠಾಣಾಕುಶನೂರ ಗ್ರಾಮ ಪಂಚಾಯತಿಯು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತರವಾದ ಹೆಜ್ಜೆಗಳನ್ನಿಟ್ಟು ಗ್ರಾಮ ಮಟ್ಟದ ಶಿಕ್ಷಣ ಗುಣ ಮಟ್ಟ ಸುಧಾರಣೆಯಲ್ಲಿ ಯಶಸ್ವನ್ನು ಕಂಡಿರುತ್ತದೆ. ಗ್ರಾಮ ಪಂಚಾಯತಿಯ ಶೈಕ್ಷಣಿಕ ಸುಧಾರಣೆಗಾಗಿ ಕೈಗೊಂಡ ಕೆಲವು ಯೋಜನೆಗಳು.

### 1) ಶಾಲೆಗಾಗಿ ನಾವು-ನೀವು & ಮಕ್ಕಳಿಗಾಗಿ ನಾವು-ನೀವು:-

ಈ ಧ್ಯೆಯವಾಕ್ಯದೊಂದಿಗೆ ಗ್ರಾಮ ಪಂಚಾಯತ ಅಧ್ಯಕ್ಷರು ಸದಸ್ಯರು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಎಲ್ಲಾ ಶಾಲೆಗಳ ಮುಖ್ಯಸ್ಥರೊಂದಿಗೆ ಚರ್ಚಿಸಿ ಶಾಲಾದಾಖಲಾತಿ ಹಾಜರಾತಿ ಹಾಗೂ ಶಿಕ್ಷಕರ ಪಾಠಭೋಧನೆ ಅವರ ಅವಿಷ್ಕಾರಿಕ ಬೋಧನೆ ಬಗ್ಗೆ ವಿಸ್ತ್ರುತವಾದ ಚರ್ಚೆ ನಡೆಸಿ ಸರ್ಕಾರ ಶಾಲೆಯ ಎಲ್ಲಾ ತರಗತಿಗಳಿಗೆ ಮಕ್ಕಳ ದಾಖಲಾತಿಗಾಗಿ ಅಭಿಯಾನ ಕೈಗೊಂಡು ನೆರವಾಗುತ್ತಾರೆ ಅಲ್ಲದೆ ಈ ಕಾರ್ಯವು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಜರುಗುವದರಿಂದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಕೈಗೊಳ್ಳಬೇಕಾದ ಸುಧಾರಣಾ ಕ್ರಮಗಳ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುತ್ತದೆ.

ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಠಾಣಾಕುಶನೂರ
ತಾ|| ಔರಾದ, ಜಿಲ್ಲೆ|| ಬೀದರ್

## 2) ಬಿಸಿ ಊಟ ಯೋಜನೆ:–

ಮಕ್ಕಳ ಮಾನಸಿಕ ಬೆಳವಣಿಗೆಯಾಗಬೇಕಾದರೆ ಸ್ವಚ್ಛ ಪರಿಸರ ಹಾಗೂ ಸುಂದರ ವಾತಾವರಣದಲ್ಲಿ ಕಲಿಕೆಯಾಗಬೇಕು ಹಾಗೆಯೇ ದೈಹಿಕ ಬೆಳವಣಿಗೆಗಾಗಿ ಪೌಷ್ಠಿಕಾಂಶಯುಕ್ತ ಆಹಾರ ಸೇವನೆ ಅಗತ್ಯ. ಸರ್ಕಾರದ ಮಹತ್ವದ ಬಿಸಿಯೂಟ ಎಲ್ಲ ಮಕ್ಕಳಿಗೆ ಸಮಾನವಾಗಿ ಹಾಗೂ ಸರಿಯಾಗಿ ದೊರಕಬೇಕು ಇದನ್ನು ,ಮನಗಂಡ ಗ್ರಾಮ ಪಂಚಾಯತ್ ಅಡುಗೆ ತಯಾರಿಸಲು ಶುದ್ಧ ನೀರು, ಬಡಿಸುವ, ಊಟ ಮಾಡಲು ಬೇಕಾದ ತಟ್ಟೆಗಳನ್ನು ಕೂಡ ಗ್ರಾಮ ಪಂಚಾಯತಿಯ ಸದಸ್ಯರು ತಮಗೆ ನೀಡಲಾದ ಗೌರವಧನದಲ್ಲಿ ಸ.ಹಿ.ಪ್ರಾ. ಶಾಲೆ ಠಾಣಾಕುಶನೂರ ತಟ್ಟೆಗಳನ್ನು ನೀಡಿರುವುದು ವಿಶೇಷ.

## 3) ಸಂಪೂರ್ಣ ಸ್ವಚ್ಚತಾ ಆಂದೋಲನ:– (ನಿರ್ಮಲ ಭಾರತ ಅಭಿಯಾನ ಯೋಜನೆ)

ಸಂಪೂರ್ಣ ಸ್ವಚ್ಚತಾ ಆಂದೋಲನ (ನಿ.ಭಾ.ಅ) ಈ ಯೋಜನೆ ಯಶಸ್ವಿಯಾಗಬೇಕಾದರೆ ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕಾದದ್ದು ಅಗತ್ಯ ಹಾಗೂ ನೈರ್ಮಲ್ಯಕರ ಆಚರಣೆಗಳನ್ನು ಕೂಡಿಸಿಕೊಳ್ಳುವದರಿಂದ ನಮ್ಮ ಆರೋಗ್ಯದ ಕಾಪಾಡುವಿಕೆಯ ಬಗ್ಗೆ ಗ್ರಾಮ ಪಂಚಾಯತ ವ್ಯಾಪ್ತಿಯ ಶಾಲಾ ಮಕ್ಕಳಲ್ಲಿ ಕ್ವಿಜ್ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಭಾಷಣ ಸ್ಪರ್ಧೆ ಜಾಗೃತಿ ಜಾಥಾ, ಬೀದಿನಾಟಕ ಹಾಗೂ ಚಲನಚಿತ್ರಗಳ ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟಾಗ ಅದರೆಲ್ಲ ಸ್ವಪ್ರೇರಿತರಾಗಿ ಪಾಲಕರಿಗೆ ಶೌಚಾಲಯ ಕಟ್ಟಿಸಿಕೊಳ್ಳಲು ಮನವೊಲಿಸಿ ಈಗ ಸುಮಾರು ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಂಡಿರುತ್ತಾರೆ ಹಾಗೂ ವಿದ್ಯಾರ್ಥಿಗಳು ಈ ಬಗ್ಗೆ ತಮ್ಮ ಶಾಲೆಗಳಲ್ಲಿಯೂ ಜಾಗೃತಿಮೂಡಿಸಿ ಸ್ವಚ್ಛ ಗ್ರಾಮ ನಿರ್ಮಾಣದವರಿಗೆ ಹೆಜ್ಜೆಯನ್ನಿಟ್ಟಿದ್ದಾರೆ. ವೈಯಕ್ತಿಕ ಸ್ವಚ್ಚತೆಗಾಗಿ, ಶಾಲಾ ಸ್ವಚ್ಛತೆಗಾಗಿ ಹಾಗೂ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ನೀಡಲಾಗುವದು ಇಡಿ ರಾಜ್ಯದಲ್ಲಿಯೇ ಪ್ರಥಮವೆಂದರು ತಪ್ಪಾಗಲಾರದು.

## 4) ಮಕ್ಕಳ ಗ್ರಾಮಸಭೆ:–

ಮಕ್ಕಳ ಗ್ರಾಮಸಭೆ ಗ್ರಾಮದ ಶೈಕ್ಷಣಿಕ ಸುಧಾರಣೆಗಾಗಿ ಇರುವ ಒಂದು ಪ್ರಮುಖ ಕಾರ್ಯಕ್ರಮ. ಮಕ್ಕಳೇ ಗ್ರಾಮ ಸಭೆಯಲ್ಲಿ ಮಕ್ಕಳು ನೀಡಿದ ಸಲಹೆ ವಿದ್ಯಾಭ್ಯಾಸದಲ್ಲಿ ಅವರ ಹಿನ್ನಡೆಗೆ ಕಾರಣ ಮೂಲಭೂತ ಸೌಲಭ್ಯ ಕೊರತೆಯಂತಹ ಸಮಸ್ಯೆಗಳ ಮೇಲೆ ವಿದ್ಯಾರ್ಥಿಗಳು ಬೆಳಕು ಚೆಲ್ಲಿದಾಗ ಸಮಸ್ಯೆಗಳನ್ನು ಗುರುತಿಸಿ ಗ್ರಾಮ ಪಂಚಾಯತ ವತಿಯಿಂದ ತಾಂಡಾದಲ್ಲಿ ಬಿ.ಆರ್.ಜಿ.ಎಫ್. ಯೋಜನೆ ಅಡಿ ಸೋಲಾರ ದೀಪ ಅಳವಡಿಸಿ ಕುಡಿಯುವ ನೀರಿನ ಸೌಲಭ್ಯ ಸ್ವಚ್ಛತೆಗೆ ಪ್ರಮುಖ ಒಟ್ಟು ನೀಡಿ ಮಕ್ಕಳ ಸುಗಮ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟು ಗ್ರಾಮ ಪಂಚಾಯತಿಯು ಸಹಕರಿಸಿದೆ.

## 5) ಎಂ.ಜಿ.ಎನ್.ಆರ್.ಈ.ಜಿ.ಎಸ್. ಕಾರ್ಯಕ್ರಮ :–

1) ಈ ಕಾರ್ಯಕ್ರಮದಡಿಯಲ್ಲಿ ಗ್ರಾಮ ಪಂಚಾಯತ ಠಾಣಾಕುಶನೂರ ವ್ಯಾಪ್ತಿಯ ಶಾಲೆ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡು ಪ್ರತಿ ಶಿಕ್ಷಕರು, ಸಸಿನೆಡುವ ಕಾರ್ಯಕ್ರಮದ ಹಮ್ಮಿಕೊಂಡು ವಿದ್ಯಾರ್ಥಿಗಳು ಶಿಕ್ಷಕರು ಅವರವರ ಸಸಿಗಳ ರಕ್ಷಣೆ ಹಾಗೂ ಪೋಷಣೆ ಮಾಡಲು ಗ್ರಾಮ ಪಂಚಾಯತಿಯ ಸದಸ್ಯರು ಹುರಿದುಂಬಿಸಿದ್ದರಿಂದ ಇಂದು ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಸ್ವಚ್ಛ ಹಾಗೂ ಹಸಿರು ವಾತಾವರಣ ಮೂಡಲು ಸಹಕಾರಿಯಾಗಿದೆ ಅಲ್ಲದೆ ಸರ್ಕಾರಿ ಪ್ರೌಢ ಶಾಲೆಗೆ ಗ್ರಾಮ ಪಂಚಾಯತಿಯ ವತಿಯಿಂದ ಪ್ರತಿವರ್ಷ ನೀಡಲಾಗುವ "ಸ್ವಚ್ಛ ಶಾಲೆ ಪ್ರಶಂಶಾ ಪ್ರಶಸ್ತಿ"ಯನ್ನು ನೀಡಿ ಗೌರವಿಸಿದೆ ಇದರಿಂದ ಇತರ ಶಾಲೆಯ ಶಿಕ್ಷಕರ ವರ್ಗ ಕೂಡ ತಮ್ಮ ಶಾಲೆಗಳಲ್ಲಿ ಸಸಿ ನೆಡಲು ಯೋಜನೆ ರೂಪಿಸಿ ಕಾರ್ಯೋನ್ಮುಖರಾಗಿದ್ದಾರೆ.

2) 2010–11ನೇ ಸಾಲಿನ ಆರ್.ಡಿ.ಪಿ.ಆರ್. ಪ್ರಧಾನ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಪಿ.ರವಿಕುಮಾರ

ರವರು ಗ್ರಾಮ ಪಂಚಾಯತ ಠಾಣಾಕುಶನೂರಿಗೆ ಭೆಟ್ಟಿ ನೀಡಿದಾಗ ಅವರಿಗೆ ಗ್ರಾಮ ಪಂಚಾಯತ ವತಿಯಿಂದ ಒಂದು ಮನವಿ ಸಲ್ಲಿಸಲಾಯಿತು ಅದೇನೆಂದರೆ ಗ್ರಾಮ ಪಂಚಾಯತ ವ್ಯಾಪ್ತಿಯ ಸರ್ಕಾರಿ ಶಾಲೆಗಳು ಹಾಗೂ ವಸತಿ ನಿಲಯಗಳು ರಕ್ಷಣಾಗೋಡೆಯಿಲ್ಲದೇ ಕಬಳಿಕೆಯಾಗುತ್ತಿರುವದು ಹಾಗೂ ಹಾನಿಯುಂಟಾಗುತ್ತಿರುವದೆಂದು, ಇದನ್ನು ಮನಗಂಡು ರಕ್ಷಣಾ ಗೋಡೆಗಳಿಗೆ ಎನ್.ಆರ್. ಇ.ಜಿ.ಎ. ಯೋಜನೆ ಅಡಿಯಲ್ಲಿ ಅವಕಾಶ ನೀಡಿದ್ದರಿಂದ ಇಂದು ಸರ್ಕಾರಿ ಪ್ರೌಢ ಶಾಲೆ ಜೂನಿಯರ ಕಾಲೇಜು ಹಾಗೂ ಬಿ.ಸಿ.ಎಂ. ವಿದ್ಯಾರ್ಥಿನಿಲಯದ ಆಸ್ತಿ ರಕ್ಷಣೆ ಹಾನಿಯನ್ನು ತಡೆಯುಲು ಗ್ರಾವು ಪಂಚಾಯುತ್‌ನಿಂದ ಸಾಧ್ಯವಾಗಿರುತ್ತದೆ.

### 6) ಸ್ವಾತಂತ್ರ್ಯ ದಿನಾಚರಣೆಯು ಸಾಮೂಹಿಕ ಧ್ವಜಾರೋಹಣ ಕಾರ್ಯಕ್ರಮ:-

ಗ್ರಾಮ ಪಂಚಾಯತ ಠಾಣಾಕುಶನೂರ ಸ್ವಾತಂತ್ರ್ಯ ದಿನಾಚರಣೆಯನ್ನು ಕಛೇರಿಯಲ್ಲಿ ಮಾತ್ರ ಆಚರಿಸದೇ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ಸಾಮೂಹಿಕ ಧ್ವಜಾರೋಹಣ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಯೋಜಿಸುವ ಮೂಲಕ ಶಿಕ್ಷಣದ ವಿದ್ಯಾರ್ಥಿಗಳ ಪ್ರತಿಭೆ, ಅನಾವರಣಕ್ಕೆ ವೇದಿಕೆಯಾಗಿದೆ ಹಾಗೂ ವಿವಿಧ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಹಾಗೂ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕ ವರ್ಗದವರಿಗೆ ಸನ್ಮಾನಿಸುವುದರ ಮೂಲಕ ಅವರುಗಳು ಗ್ರಾಮದ ಶೈಕ್ಷಣಿಕ ಸುಧಾರಣೆಯಲ್ಲಿ ಇನ್ನು ಹೆಚ್ಚು ಸಾಧನೆ ಗೈಯಲು ಗ್ರಾಮ ಪಂಚಾಯತಿಯು ಹುರಿದುಂಬಿಸುತ್ತಿದೆ ಅಲ್ಲದೇ ಅದೇ ವೇದಿಕೆಯಲ್ಲಿ ಪವಾಡ ರಹಸ್ಯ ಬಯಲು, ಹಾಸ್ಯ ಕಾರ್ಯಕ್ರಮ, ಭಾಷಣ ಸ್ಪರ್ದೆ ಕವನವಾಚನ ಸ್ಪರ್ಧೆ ಏರ್ಪಡಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ, ಸ್ಪರ್ಧಾ ಮನೋಭಾವನೆ

ರೂಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಹಾಗೂ ಎಸ್.ಎಸ್.ಎಲ್.ಸಿ.ಯಲ್ಲಿ ಸಾಧನೆಗೈದ ಪ.ಜಾ. ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಪ್ರೋತ್ಸಾಹಧನ ನೀಡುವದು ಮತ್ತು ಗ್ರಾಮ ಪಂಚಾಯತ ಗ್ರಂಥಾಲಯ ಶಾಲೆಗಳಿಗೆ ಅಂಬೇಡ್ಕರ, ವಿವೇಕಾನಂದ, ಬಸವೇಶ್ವರರಂತಹ ಮಹಾನ್ ಸಾಧಕರ ಜೀವನ ಚರಿತ್ರೆಯ ಪುಸ್ತಕಗಳನ್ನು ನೀಡಲಾಗುತ್ತಿದೆ. ಜೊತೆಗೆ ಶಾಲೆಗಳಿಗೆ ಅಲಮರಿ(ಗಾಡ್ರೆಜ್), ಕುರ್ಚಿಗಳನ್ನು ನೀಡಿ ಶಿಕ್ಷಣದ ಸುಧಾರಣೆಗಾಗಿ ಶ್ರಮಿಸಲು ಗ್ರಾಮ ಪಂಚಾಯತಿಯು ಬೆನ್ನು ತಟ್ಟುತ್ತಿದೆ.

### 7) ಎನ್.ಎಸ್.ಎಸ್. ಹಾಗೂ ಕ್ರೀಡಾ ಸ್ಪರ್ಧೆಗಳ ಆಯೋಜನೆ:-

ಇಂದಿನ ದಿನಗಳಲ್ಲಿ ಸ್ವಯಂ ಸೇವೆ ಎಂಬುದು ಮರೀಚಿಕೆಯ ಮಾತಾಗಿದೆ ಇಂಥಹದರಲ್ಲಿ ಗ್ರಾಮ ಪಂಚಾಯತ ಠಾಣಾಕುಶನೂರ ತನ್ನ ವ್ಯಾಪ್ತಿಯ ಅನುದಾನಿತ ಪಾಲಿಟೆಕ್ನಿಕ ವಿದ್ಯಾರ್ಥಿಗಳನ್ನು ಬಳಸಿಕೊಂಡು ಕಳೆದ ವರ್ಷ ನೀಡೋದಾ ಗ್ರಾಮದಲ್ಲಿ ಶೈಕ್ಷಣಿಕ ಎನ್.ಎಸ್.ಎಸ್. ಕಾರ್ಯ ಕ್ರಮವನ್ನು ಹಮ್ಮಿಕೊಂಡು ವರದಕ್ಷಿಣೆ ಪಿಡುಗು, ಬಾಲ್ಯ ವಿವಾಹ ಶೌಚಾಲಯ ಬಳಕೆಯ ಮಹತ್ವ ಸ್ವಚ್ಚತೆ ಹಾಗೂ ಕೃಷಿ ಕ್ಷೇತ್ರದಲ್ಲಿನ ಪ್ರಚಲಿತ ವಿದ್ಯಾಮಾನಗಳ ಕುರಿತು ಪಿ.ಡಿ.ಓ. ನೇತೃತ್ವದಲ್ಲಿ ತಂಡವಾಗಿ ಕಾರ್ಯನಿರ್ವಹಿಸಿದೆ. ಅಲ್ಲದೆ ಕ್ರಿಕೆಟ, ವಾಲಿಬಾಲ, ರಂಗೋಲಿಯಂತಹ ಸ್ಪರ್ದೆಗಳನ್ನು ಆಯೋಜಿಸಿ ವಿದ್ಯಾರ್ಥಿಗಳಲ್ಲಿ ಕ್ರೀಡಾಸ್ಪೂರ್ತಿ ಹಾಗೂ ಸ್ಪರ್ಧಾ ಮನೋಭಾವನೆಗಳನ್ನು ಮೂಡಿಸಲಾ ಗುತ್ತಿದೆ.

**8) ಶೈಕ್ಷಣಿಕ ಚಿಂತನ ಮಂಥನ ಕಾರ್ಯಕ್ರಮ:**

ಈ ಕಾರ್ಯಕ್ರಮವನ್ನು ಗ್ರಾಮ ಪಂಚಾಯತ ವತಿಯಿಂದ ಜನೇವರಿ ತಿಂಗಳಲ್ಲಿ ಆಯೋಜಿಸಲಾಗುತ್ತದೆ. ಇದರಲ್ಲಿ ಭಾಗವಹಿಸಲು ಗ್ರಾಮ ಪಂಚಾಯತ ಸದಸ್ಯರ ವ್ಯಾಪ್ತಿಯ

ಪಾಲಕರು ಶಿಕ್ಷಣ ಪ್ರೇಮಿಗಳು ಗ್ರಾಮದ ಯುವಕರು, ಗ್ರಾಮ ಪಂಚಾಯತ ಸದಸ್ಯರು ಗ್ರಾಮ ಪಂಚಾಯತ ವ್ಯಾಪ್ತಿಯ ಶಾಲೆಗಳ ದೈಹಿಕ ಶಿಕ್ಷಕರು ಮುಖ್ಯ ಗುರುಗಳು ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ತಾಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳನ್ನು ಗ್ರಾಮ ಪಂಚಾಯತ ಕಛೇರಿಗೆ ಆಹ್ವಾನಿಸಿ ಶೈಕ್ಷಣಿಕ ವರ್ಷದ ಕೊನೆಯ ಮೂರು ತಿಂಗಳುಗಳಲ್ಲಿ ಕೈಗೊಳ್ಳ ಬೇಕಾದ ಸುಧಾರಣಾ ಕ್ರಮಗಳು, ಫಲಿತಾಂಶ ಹೆಚ್ಚಳಕ್ಕಾಗಿ ಮಾಡಬಹುದಾದ ಕಾರ್ಯಕ್ರಮಗಳು ಹಾಗೂ ಮಕ್ಕಳ ಸಮಗ್ರ ಶಿಕ್ಷಣದ ಸುಧಾರಣೆಗಾಗಿ ಚಿಂತನೆ ಮಂಥನ ಕೈಗೊಂಡು ಕೈಗೊಂಡಿರುವ ನಿರ್ಣಯಗಳನ್ನು ಜಾರಿಗೆ ತರಲು ಪ್ರಯತ್ನಿಸಲಾಗುತ್ತದೆ. ಇದರ ಫಲವಾಗಿ ಫೇಬ್ರುವರಿ ತಿಂಗಳಲ್ಲಿ ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಪರೀಕ್ಷಾ ಸಿದ್ದತಾ ಪೂರ್ವ ತಯಾರಿ ಬಗ್ಗೆ ಕಾರ್ಯಗಾರವನ್ನು ಬೀದರ ಜಿಲ್ಲೆಯಲ್ಲಿಯೇ ಪ್ರಥಮ ಬಾರಿಗೆ ಗ್ರಾಮ ಪಂಚಾಯತ ಠಾಣಾಕುಶನೂರ ವತಿಯಿಂದ ಏರ್ಪಡಿಸಿ ಮಾನ್ಯ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ದೀಪಿಕಾ ಸಚೀನ ರಾಠೋಡ ರವರಿಂದ ಉದ್ಘಾಟಿಸುವದರ ಮೂಲಕ ಸುಮಾರು 250 ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಬಗ್ಗೆ ವಿಷಯವಾರು ಮಾಹಿತಿ ಹಾಗೂ ಸರಳ ರೂಪದಲ್ಲಿ ಪರೀಕ್ಷೆ ಎದುರಿಸುವ ಬಗ್ಗೆ ಮಾಹಿತಿ ಒದಗಿಸಲಾಗಿದೆ. ಇದರಿಂದ ಪ್ರೇರಿತಗೊಂಡ ಅನೇಕ ಶಿಕ್ಷಣ ಪ್ರೇಮಿಗಳು, ಶೀಕ್ಷಕರು, ಹಾಗೂ ಗಣ್ಯರು ಠಾಣಾಕುಶನೂರ ಗ್ರಾಮ ಪಂಚಾಯತಿಯ ಶೈಕ್ಷಣಿಕ ಕಾಳಜಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.

**9) ಅಂಗನವಾಡಿ ಹಾಗೂ ಲೋಕ ಶಿಕ್ಷಣ ಕೇಂದ್ರಗಳ ಮೂಲಕ ಶಿಕ್ಷಣದ ಸುಧಾರಣೆಗಾಗಿ ಪ್ರಯತ್ನ:**

1) ಠಾಣಾಕುಶನೂರ ಗ್ರಾಮ ಪಂಚಾಯತ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ ವಿತರಣೆ ಲಸಿಕಾ, ಕಾರ್ಯಕ್ರಮ ಹಾಗೂ ಇತರೆ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರ್ವಹಿಸಲು ಆಯೋಜಿಸಲು ಗ್ರಾಮ ಪಂಚಾಯತ ಮು. ಅಂಗನವಾಡಿ ಕಾರ್ಯಕರ್ತರಿಗೆ ಸದಾ ಸಹಾಯ ಮಾಡುತ್ತಿದೆ ಹಾಗೂ ಕೇಂದ್ರಗಳ ನಿರ್ವಹಣೆಗಾಗಿ ಹಾಗೂ ಖಾಸಗಿ ಕಟ್ಟಡದ ಬಾಡಿಗೆಗಾಗಿ ಗ್ರಾಮ ಪಂಚಾಯತ ಠಾಣಾಕುಶನೂರನಿಂದ ಪ್ರತಿ ತಿಂಗಳಧನ ಸಹಾಯವನ್ನು ನೀಡಲಾಗುತ್ತಿದೆ. ಹಾಗೂ ಪ್ರತಿವರ್ಷ ಬಹುಮಾನ, ಪರಿಕರಗಳನ್ನು ನೀಡಿ ಪ್ರೋತ್ಸಾಹಿಸುತ್ತದೆ.

2) ಲೋಕ ಶಿಕ್ಷಣ ಕೇಂದ್ರಗಳ ಮೂಲಕ ವಯಸ್ಕ ವೃಧ್ಧರು ಹಾಗೂ ಅನಕ್ಷರಸ್ಥರಿಗೆ ಅಕ್ಷರದ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಹಾಗೂ ಪ್ರತಿ ವರ್ಷ ಪರೀಕ್ಷೆಗಳನ್ನು ಏರ್ಪಡಿಸಿ ಅವರ ಕಲಿಕೆಯ ಮಟ್ಟವನ್ನು ಮಾಪನ ಮಾಡಲಾಗುತ್ತಿದೆ.

ಈ ಎಲ್ಲಾ ಚಟುವಟಿಕೆ ಕಾರ್ಯಕ್ರಮಗಳ ಮೂಲಕ ಗ್ರಾಮ ಪಂಚಾಯತ ಠಾಣಾಕುಶನೂರರ ಸನ್ಮಾನ್ಯ ಸದಸ್ಯರು ಅಧ್ಯಕ್ಷರು ಪಿ.ಡಿ.ಓ. ರವರ ಒಂದೇ ಆಸೆ ಅದು ನಮ್ಮ ಗ್ರಾಮ, ಸ್ವರಾಜವಾಗಬೇಕು ಹಾಗೂ ಪ್ರತಿಯೊಬ್ಬರು ಗುಣ್ಣಮಟ್ಟದ ಶಿಕ್ಷಣ ಹೊಂದಬೇಕು ಬಸವಣ್ಣನವರ ಆಶಯದಂತೆ "ಜ್ಞಾನದಿಂದ ಅಜ್ಞಾನದ ಕೇಡ ನೋಡ" ಎಂಬಂತೆ ಶಿಕ್ಷಣದಿಂದಲೇ ಸಮಾಜ ಗ್ರಾಮದೇಶದ ಉಜ್ವಲ ಎಂಬ ಆಶಯ "ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು" ಎಂಬ ಆಶಯದೊಂದಿಗೆ ಗ್ರಾಮ ಪಂಚಾಯತ ಠಾಣಾಕುಶನೂರ ಇಂದು ತನ್ನ ಕಾರ್ಯವನ್ನು ಅತಿ ಹೆಮ್ಮೆಯಿಂದ ನಿರ್ವಹಿಸುತ್ತಿದೆ. ಹಾಗೂ ಇಡಿ ಜಿಲ್ಲೆಯಲ್ಲಿಯೇ ಮೆಚ್ಚುಗೆಯ ಗ್ರಾಮ ಪಂಚಾಯತಿಯಾಗಿ ಹೊರಹೊಮ್ಮಿದೆ.

**ಜೈ ಪಂಚಾಯತ ರಾಜ**

# ಸಾಲಕೋಡ ಗ್ರಾಮ ಪಂಚಾಯತಿ

ಶ್ರೀ ಕೇಶವಮೂರ್ತಿ

**ಉತ್ತರ ಕನ್ನಡ ಜಿಲ್ಲಾ ಕೇಂದ್ರದಿಂದ 98 ಕಿ.ಮೀ. ದೂರವಿರುವ ಸಾಲಕೋಡ ಗ್ರಾಮ ಪಂ.ನ ಅಭಿವೃದ್ಧಿ ಬಗ್ಗೆ ಒಂದು ಕಿರು ಚಿತ್ರಣ**

ಈ ಸಾಲಕೋಡ ಗ್ರಾಮ ಪಂಚಾಯತಿಯು ಜಿಲ್ಲಾ ಕೇಂದ್ರ ಕಾರವಾರದಿಂದ ಸುಮಾರು 98ಕಿ.ಮೀ. ಹಾಗೂ ತಾಲೂಕಾ ಕೇಂದ್ರ ಹೊನ್ನಾವರದಿಂದ 10ಕಿ.ಮೀ. ಅಂತರದಲ್ಲಿದೆ. ಈ ಗ್ರಾಮಕ್ಕೆ ಜನ ಪ್ರದೇಶ ಆದದ್ದು ಪೂರ್ವದಿಂದಲೋ ಪಶ್ಚಿಮದಿಂದಲೋ ಎಂದು ತಿಳಿಯದು. ಈ ಗ್ರಾಮದ ಪೂರ್ವಕ್ಕೆ ಹೋದಂತೆ ದಟ್ಟವಾದ ಅರಣ್ಯ ಮುತ್ತಿಕೊಂಡಿದೆ. ಈ ಅರಣ್ಯ ಪ್ರದೇಶದಲ್ಲಿ ರಾಜಬೀದಿ ಎನ್ನುವಂತ ದಾರಿಗಳು ಹಾಗೆಯೇ ದೇವಸ್ಥಾನ ಬಾವಿ ಸಿಕ್ಕುತ್ತವೆ. ಅರಣ್ಯ ಮಧ್ಯದಲ್ಲಿ ಹಾಳು ಬಿದ್ದ ದೇವಸ್ಥಾನದಿಂದಲೇ ಕೆರೆಕೋಣ, ಬೋಳ್ಗೇರೆ, ಹೆಡಮಂಗಲ ದೇವಸ್ಥಾನಕ್ಕೆ ಗಣಪತಿ ಶಿಲಾವಿಗ್ರಹವನ್ನು ತರಲಾಗಿದೆ. ಇವೆಲ್ಲವನ್ನು ಹೇಳುವ ಉದ್ದೇಶವೇನೆಂದರೆ ಶತಶತಮಾನದ ಹಿಂದೆ ಇದು ಕಾಡು ಆಗಿರಲಿಲ್ಲ. ಸುಮಾರು ಐವತ್ತು ವರ್ಷಗಳ ಈಚೆ ಇಲ್ಲಿ ಕೃಷಿ ಕಾರ್ಮಿಕರಲ್ಲಿ ಉಂಟಾದ ಜಾಗೃತಿಯಿಂದಲೋ ಜನಸಂಖ್ಯೆಯ ಹೆಚ್ಚಳದಿಂದಲೋ ಅರಣ್ಯ ಜಮೀನನ್ನು ಅತಿಕ್ರಮಣ ಮಾಡಿ ನೂರಾರು ಕುಟುಂಬಗಳು ಈ ಗ್ರಾಮದ ಹಾಗೂ ಚಿಕ್ಕನಕೋಡ ಗ್ರಾಮಕ್ಕೆ ಸೇರಿದ ಹೀರೆಬೈಲ ಹೊಸಗೂಡಗಳಲ್ಲಿ ಗದ್ದೆ, ತೋಟಗಳನ್ನು ಮಾಡಿದ್ದಾರೆ. ಈ ಪ್ರದೇಶವೆಲ್ಲ ಬೆಟ್ಟದ ಮಧ್ಯದಲ್ಲಿ ತಗ್ಗು ಪ್ರದೇಶದಲ್ಲಿರುವ ಒಂದು ಕಾಲಕ್ಕೆ ಸಾಗುವಳಿ ಕ್ಷೇತ್ರವಾಗೇ ಇದ್ದಿತು. ಇದರಿಂದ ಐತಿಹಾಸಿಕ ಸಂದರ್ಭವನ್ನು ಗಮನಿಸುವುದಾದರೆ 16–17ನೇ ಶತಮಾನದಲ್ಲಿ ಗೇರು ಸೊಪ್ಪೆ ಮತ್ತು ಘಟ್ಟದ ಮೇಲಿನ ಪ್ರದೇಶವಾದ ಬಿಳಗಿ ರಾಜ್ಯ



**ಕಾಮಗಾರಿ ಪ್ರಾರಂಭಿಸುವುದಕ್ಕಿಂತ ಮೊದಲಿನ ದ್ರಶ್ಯ :**

ಜಿಲ್ಲಾ ಸಾಮಾಜಿಕ ಲೆಕ್ಕ ಪರಿಶೋಧನೆ ಸಂಯೋಜಕರು,
ತಾಲ್ಲೂಕು ಮತ್ತು ಜಿಲ್ಲೆ ಉತ್ತರ ಕನ್ನಡ

ಪ್ರದೇಶವಾಗಿದೆ. ಅಂದರೆ ಈ ಬೆಟ್ಟದ ಪ್ರದೇಶ ಬಿಳಗಿಯಿಂದ ಗೇರುಸೊಪ್ಪ, ನಗರೆ ತನಕ ಸಂಪರ್ಕ ಹಬ್ಬಿತ್ತು ಎನ್ನಬಹುದಾಗಿದೆ. ಕಾಲಾಂತರದಲ್ಲಿ ಈ ರಾಜ ಮನೆತನಗಳು ನಾಶವಾಗಿ ಹಿಂದಿನ ನಗರಗಳು ಅಳಿದವು. ಅದರೊಟ್ಟಿಗೆ ಬ್ರಿಟಿಷರ ಯೋಜನೆಯಿಂದಾಗಿ ಇದು ಅರಣ್ಯ ಪ್ರದೇಶವಾಗಿ ಪರಿವರ್ತನೆ ಆದಂತಿದೆ. ಹೀಗೆ ಪಟ್ಟಣದ ನಾಶವಾದಾಗ ಅರಣ್ಯ ಆವರಿಸಿ ಬೆಳೆಯುತ್ತಿದ್ದ ಹಾಗೇ ಜನರು ಕಾಡು ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಆಹಾರವನ್ನು ಅರಸಿ ತಾವಿರುವ ಸ್ಥಳದಿಂದ ಪಶ್ಚಿಮಕ್ಕೆ ತೆಳ್ಳಗಿನ ಅರಣ್ಯ ಪ್ರದೇಶದ ಕಡೆ ವಲಸೆ ಬಂದಿರಬೇಕು. ಹೀಗೆ ವಲಸೆ ಬಂದಿದ್ದವರಿಗೆ ಕಂಡಿದ್ದು ಸುತ್ತಲೂ ಬಳ್ಳಿ ಬರದಂತೆ ಚೂಪಾಗಿ ಅನೇಕ ಕೋಡುಗಳು ಎತ್ತಿಕೊಂಡಿರುವ ಸಾಲು ಸಾಲು ಗುಡ್ಡ ಬೆಟ್ಟಗಳು ಮಧ್ಯೆ ಬಯಲು ಪ್ರದೇಶ ಮನೆ ಮಾಡು ಕೃಷಿ ಮಾಡುತ್ತಿರುವ ಸ್ಥಳದಿಂದ ನಿಂತು ನೋಡಿದ ಜನರಿಗೆ ಸಾಲು ಸಾಲು ಕೋಡುಗಳ ಪರ್ವತ ಶಿಖರ ಪ್ರದೇಶವಾಗಿ ಕಂಡಿದ್ದರಿಂದಲೇ ಇದಕ್ಕೆ 'ಸಾಲಕೋಡ' ಎಂದು ಹೆಸರು ಬಂತು.

ಈ ಸಾಲಕೋಡ ಗ್ರಾಮ ಪಂಚಾಯತ್‌ನ ಅಡಿಮನೆ ಎನ್ನುವುದು ಒಂದು ಮಜಿರೆ. ಈ ಮಜಿರೆ ಹಡಿಮನೆ ಸುತ್ತುವರಿದು ದಕ್ಷಿಣಕ್ಕೆ ತಿರುಗಿ ಮತ್ತೆ ಪೂರ್ವಕ್ಕೆ ಕೇಶುಪಾಲ, ಕಾನಕ್ಕಿ, ದರ್ಬೆಜಡ್ಡಿ, ಅಠಾರ ಹಾದು ತುಳಸಾಣಿಗೆ ಅಂತ್ಯವಾಗುತ್ತದೆ. ಇಲ್ಲಿ ಈಗ ಹಡಿಮನೆ ಎಂದು ಬದಲಾಗಿದೆ. ಮೂಲತ: ಅದು 'ಹಾಡಿಮನೆ' ಇರಬೇಕು. 'ಹಾಡಿ' ಎಂದರೆ ಹುಲ್ಲು-ಸೊಪ್ಪು ಬೆಳೆಯುವ ಜಾಗ. ಗದ್ದೆ-ತೋಟದ ಪಕ್ಕ ಅಲ್ಲಿಯ ಮನೆಗಳನ್ನು ಗುರುತಿಸಲು ಜನ 'ಹಾಡಿಮನೆ' ಎಂದು ಕರೆದಿರಬೇಕು. ಅದು ಮುಂದೆ ಜನರ ಬಾಯಲ್ಲಿ 'ಹಡಿಮನೆ' ಎಂದು ಆಯಿತು. 'ಹಡಿ' ಎನ್ನುವುದಕ್ಕೆ ಅಶ್ಲೀಲ ಅರ್ಥ ಬರುತ್ತದೆ, ಎನ್ನುವ ಕಾರಣದಿಂದ ಈಗಿನ ಹೊಸಬರು 'ಹಡಿ' ಎನ್ನುವುದರ ಬದಲಾಗಿ 'ಅಡಿ' ಮನೆಯನ್ನಾಗಿ ಮಾಡಿದ್ದಾರೆ. ಅಂತೆಯೇ ಈ ಮಜಿರೆಯಲ್ಲಿ ಜನ ವಾಸ್ತವ್ಯ ಕಡಿಮೆ ಇದ್ದರು ಸಹ ಇಲ್ಲಿನ ಜನರು ಹೆಚ್ಚಿನದಾಗಿ ತೋಟದ ಬೆಳೆಯಾದ ತೆಂಗು, ಅಡಿಕೆ, ಬಾಳೆ, ಮತ್ತು ವೀಳ್ಯದೆಲೆ ಬೆಳೆಗಳನ್ನು ಹೆಚ್ಚಾಗಿ ಬೆಳೆದು ಜೀವನ ನಡೆಸುತ್ತಾ ಬಂದಿರುತ್ತಾರೆ. ಹೀಗಿರುವಾಗ ಈ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇಂತಹದೊಂದು ವೈಯಕ್ತಿಕ ಕಾಮಗಾರಿ ಪ್ರಾರಂಭವಾಗುತ್ತೆ ಎಂದು ಯಾರು ತಿಳಿದಿರಲಿಲ್ಲ.

ಈ ಕಾಮಗಾರಿ ಆರಂಭಕ್ಕಿಂತ ಮೊದಲು ಈ ಜಮೀನಿಗೆ ಮಳೆಗಾಲದಲ್ಲಿ ಗುಡ್ಡದಿಂದ ನೀರು ಹರಿದು ಬರುತ್ತಿರುವುದರಿಂದ ಜಮೀನಿನಲ್ಲಿರುವ ಮಣ್ಣು ಮತ್ತು ಪ್ರತಿ ವರ್ಷದಲ್ಲಿ ಹಾಕುತ್ತಿರುವ ಗೊಬ್ಬರ ಮಳೆ ನೀರಿಗೆ ಕೊಚ್ಚಿ ಹೋಗುತ್ತಿರುವುದರಿಂದ ಜಮೀನಿನಲ್ಲಿರುವ ತೆಂಗು, ಅಡಿಕೆ ಮರ, ಬಾಳೆ ಗಿಡಗಳು ಸರಿಯಾಗಿ ಬೆಳೆಯದೇ ಹಾಗೇ ನಾಶವಾಗುತ್ತಿತ್ತು. ಈ ತೋಟದ ಬೆಳೆಯ ನಾಶವನ್ನು ತಪ್ಪಿಸಲು ವಿಠ್ಠಲ ನಾರಾಯಣ ಶೆಟ್ಟಿಯವರಿಗೆ ಹಣದ ಕೊರತೆ ಹಾಗೂ ಬೇರೆ ಯಾವ ಯೋಜನೆಯಲ್ಲಿ ಈ ಕಾಮಗಾರಿ ತೆಗೆದುಕೊಳ್ಳಲು ಅವಕಾಶ ದೊರೆತಿರಲಿಲ್ಲ. ಹೀಗಿರುವಾಗ ಹೆಚ್ಚಿನ ಪ್ರಚಾರದಲ್ಲಿದ್ದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಪಂಚಾಯತದಿಂದ ಮಾಹಿತಿ ಪಡೆದುಕೊಂಡ ಈ



**ಕಾಮಗಾರಿ ಸ್ಥಳದಲ್ಲಿ ಕೆಲಸದಲ್ಲಿ ನಿರತರಾದ ಕೂಲಿಕಾರರ ಜೊತೆ ಫಲಾನುಭವಿ**



**ಕಾಮಗಾರಿ ಮುಕ್ತಾಯ ಹಂತದಲ್ಲಿರುವುದು.**

ಫಲಾನುಭವಿ ಹಾಗೂ ಕೂಲಿ ಬಯಸಿ ಬಂದ ಕೂಲಿಕಾರರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಮುಂದಾಗಿ ಉದ್ಯೋಗ ಚೀಟಿಯನ್ನು ಪಡೆದುಕೊಂಡು ಕಾಮಗಾರಿ ಪ್ರಾರಂಭಿಸಲು ಬೇಡಿಕೆ ಅರ್ಜಿಯನ್ನು ಸಲ್ಲಿಸಿದ್ದರು.

ಬೇಡಿಕೆ ಅರ್ಜಿಗೆ ಅನುಗುಣವಾಗಿ ತಾಲೂಕಾ ಪಂಚಾಯತನಿಂದ ಕಾಮಗಾರಿಗೆ ಆದೇಶವನ್ನು ಪಡೆದು ಕಾಮಗಾರಿಯನ್ನು ಪ್ರಾರಂಭಿಸಿದ್ದರು. ಈ ಕಾಮಗಾರಿಗೆ ಸುಮಾರು ರೂ.20,000 ಅಂದಾಜು ವೆಚ್ಚ ಅಂದಾಜು ಪತ್ರಿಕೆಯನ್ನು ತಯಾರಿಸಿ ಕೂಲಿ ವೆಚ್ಚಕ್ಕಾಗಿ ರೂ. 19,000 ಹಾಗೂ ಸಲಕರಣೆ ವೆಚ್ಚಕ್ಕಾಗಿ ರೂ. 456 ಖರ್ಚನ್ನು ಮಾಡಿರುತ್ತಾರೆ. ಈ ಕಾಮಗಾರಿಯಲ್ಲಿ ತೋಟಕ್ಕೆ ಮಣ್ಣು ಮತ್ತು ಸ್ಥಳೀಯವಾಗಿ ದೊರೆತ್ತಿರುವ ಕಲ್ಲಿನಿಂದ ತಡೆಗೋಡೆ ನಿರ್ಮಿಸಲಾಗಿದೆ.

### ಕಾಮಗಾರಿ ಮುಕ್ತಾಯ ಹಂತದಲ್ಲಿರುವುದು.

ಕಾಮಗಾರಿ ಮಾಡಿದ್ದರಿಂದ ಫಲಾನುಭವಿಗಳು ಸಂತೋಷದಿಂದ ಈ ಒಂದು ಜಮೀನಿನಲ್ಲಿ ನಮಗೆ ಅಡಿಕೆಮರ, ತೆಂಗಿನ ಮರ ಹಾಗೂ ಬಾಳೆಗಿಡಗಳಿಗೆ ಮಣ್ಣು ಹಾಕಿದ್ದರಿಂದ ನಾವು ಇಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆಯಲು ಕಾರಣವಾಯಿತು. ಹಾಗೂ ಗುಡ್ಡದಿಂದ ಹರಿದು ಬರುವ ನೀರಿನಿಂದ ಗೊಬ್ಬರದ ತೇವಾಂಶ ಮಣ್ಣು ಕೊರೆತವನ್ನು ತಪ್ಪಿಸಲು ತಡೆಗೋಡೆ ನಿರ್ಮಿಸಿದ್ದರಿಂದ ಈ ಜಮೀನಿಗೆ ಒಳ್ಳೆಯ ರಕ್ಷಣೆಯಾಗಿದೆ. ಹಾಗೂ ಈ ಮಹತ್ವದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸಲು ಸಹಾಯವಾಗುತ್ತದೆ. ಹಾಗೂ ಉತ್ತಮ ರೀತಿಯಲ್ಲಿ ಕಾಮಗಾರಿಗಳನ್ನು ಮಾಡಿಸಬಹುದಾಗಿದೆ. ನನ್ನಂತೆಯೇ ಅನೇಕ ಕೃಷಿಕ ಮಿತ್ರರು ತಮ್ಮ ಜಮೀನಿನಲ್ಲಿ ಅಭಿವೃದ್ಧಿ ಕೆಲಸ ಮಾಡಿಸುವುದಕ್ಕೆ ಅನುಕೂಲಕರವಾದ ಸರಕಾರದ ಒಂದು ಉತ್ತಮ ಯೋಜನೆಯಾಗಿರುತ್ತದೆ. ಅಂತೆಯೇ ಈ ಯೋಜನೆಯಿಂದ ನನ್ನ ಜಮೀನು ಅಭಿವೃದ್ಧಿ ಪಡಿಸಿಕೊಂಡಿರುವುದಷ್ಟೇ ಅಲ್ಲ, ಸರಕಾರ ಸಹಾಯ ಮಾಡಿದ್ದಕ್ಕೆ ನಾನು ಚಿರ ಋಣಿ ಹಾಗೂ ಈ ಯೋಜನೆಯ ಪ್ರಯೋಜನದಿಂದ ನಾನು ಸಂತುಷ್ಟನಾಗಿದ್ದೇನೆ.




# ಪಂಚಾಯತ್ ಸಬಲೀಕರಣ ಯೋಜನೆ (PEAIS) ರಾಜ್ಯದ ಸಾಧನೆ

**ಅತ್ಯುನ್ನತ ಸಾಧನೆ ಮಾಡುವ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ಪ್ರಶಸ್ತಿ ಕೊಡಮಾಡುವ ಪಂಚಾಯತ್ ಸಬಲೀಕರ ಯೋಜನೆಯ ಪರಿಚಯ ಈ ಲೇಖನದಲ್ಲಿದೆ.**

### 1. ರಾಜ್ಯ ಪ್ರಶಸ್ತಿ:

ರಾಜ್ಯಗಳನ್ನು ಪ್ರೋತ್ಸಾಹಿಸಲು (PEAIS) ಯೋಜನೆ ರಾಷ್ಟ್ರ ಮಟ್ಟದಲ್ಲಿ ಜಾರಿಯಲ್ಲಿದೆ.

ಸಂವಿಧಾನದ 73ನೇ ತಿದ್ದುಪಡಿಗೆ ಸಕ್ರಿಯವಾಗಿ ಸ್ಪಂದಿಸುವ ರಾಜ್ಯ ಸರ್ಕಾರಗಳಿಗೆ ಬಹುಮಾನ ನೀಡಲಾಗುವುದು.

ಕರ್ನಾಟಕ ರಾಜ್ಯಕ್ಕೆ ಸತತವಾಗಿ ಈ ಯೋಜನೆಯನ್ನು ಈ ಕೆಳಕಂಡಂತೆ ಬಹುಮಾನಗಳು ಬಂದಿರುತ್ತವೆ.

- 2012–13ನೇ ಸಾಲಿಗೆ ಪ್ರಥಮ ಬಹುಮಾನ – ರೂ.2.50 ಕೋಟಿ ಬಹುಮಾನ
- 2011–12ನೇ ಸಾಲಿಗೆ ಎರಡನೇ ಬಹುಮಾನ – ರೂ.2.00 ಕೋಟಿ ಬಹುಮಾನ
- 2010–11ನೇ ಸಾಲಿಗೆ ಎರಡನೇ ಬಹುಮಾನ – ರೂ.2.00 ಕೋಟಿ ಬಹುಮಾನ
- 2005–06ನೇ ಸಾಲಿಗೆ ಪ್ರಥಮ ಬಹುಮಾನ – ರೂ.3.00 ಕೋಟಿ ಬಹುಮಾನ

ಸಂವಿಧಾನದ ಪ್ರಕರಣ 243 ರ 73ನೇ ತಿದ್ದುಪಡಿಗನುಗುಣವಾಗಿ ಅನುಚ್ಛೇದ 11 ರಲ್ಲಿ ವಿವರಿಸಿರುವ 29 ವಿಷಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ.

Fund, Function and Functionaries ಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. 2004ರ ಸರ್ಕಾರಿ ಆದೇಶದನ್ವಯ.

What needs to be done at a particular level should be done at that level only, otherwise known as the principle of subsidiarity ತತ್ವದ ಮೇಲೆ ಚಟುವಟಿಕೆ ನಕ್ಷೆಗೆ ಅನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆಗಳು ಕರ್ತವ್ಯ ನಿರ್ವಹಿಸಲು ಅವಕಾಶವಾಗುವಂತೆ 2003 ರಲ್ಲಿಯೇ ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಜಿಲ್ಲಾ ವಲಯ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಪಂಚಾಯತ್ ವಿಂಡೋ ಅನ್ನು ರಾಜ್ಯ ಬಜೆಟ್‌ನಲ್ಲಿ ಸೃಜಿಸಲಾಗಿದೆ.

ರಾಜ್ಯ ಚುನಾವಣಾ ಆಯೋಗಕ್ಕೆ 3 ಹಂತದ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ನೇರ

ಚುನಾವಣೆಯ ಎಲ್ಲಾ ಪ್ರಕ್ರಿಯೆಗಳ ಜವಾಬ್ದಾರಿಯನ್ನು ನೀಡಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸಲಾಗುತ್ತಿದೆ.

ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ ವಾರ್ಷಿಕ ರಾಜ್ಯ ಆಯವ್ಯಯದಲ್ಲಿ (Non Loan Net Own Revenue Receipts of the State) ಶೇ.32 ರಷ್ಟನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನ ರೂ.8.00 ರಿಂದ 10.00 ಲಕ್ಷವನ್ನು ಬಿಡುಗಡೆ ಮಾಡಲಾಗುತ್ತಿದೆ. ತಾಲ್ಲೂಕು ಪಂಚಾಯತಿಗಳಿಗೆ ರೂ.1.00 ಕೋಟಿ ಅಭಿವೃದ್ಧಿ ಅನುದಾನ ಹಾಗು ಜಿಲ್ಲಾ ಪಂಚಾಯತಿಗಳಿಗೆ ರೂ.2.00 ಕೋಟಿಗಳ ಅಭಿವೃದ್ಧಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಈ ಯೋಜನೆಗಳ ಆಯ್ಕೆಯನ್ನು ಜನರಿಂದಲೇ ವಾರ್ಡ್ ಸಭೆ ಮತ್ತು ಗ್ರಾಮಸಭೆಯಲ್ಲಿ ಆಯ್ಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ವಾರ್ಷಿಕ 4 ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳು ರಾಜ್ಯದಲ್ಲಿ ನಡೆಯುತ್ತಿವೆ.

ಹಿಂದಿನ ವರ್ಷ ಗ್ರಾಮ ಪಂಚಾಯತಿ ಹಾಗು ತಾಲ್ಲೂಕು ಪಂಚಾಯತಿ ವತಿಯಿಂದ ಹಮ್ಮಿಕೊಳ್ಳಲಾದ ಎಲ್ಲಾ ಕಾರ್ಯಕ್ರಮಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ ಆಗಸ್ಟ್ 16 ರಿಂದ ಸೆಪ್ಟೆಂಬರ್ 15 ರೊಳಗೆ ಸಾರ್ವಜನಿಕರ ಸಮ್ಮುಖದಲ್ಲಿ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಗ್ರಾಮ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಹಾಗು ಜಿಲ್ಲಾ ಪಂಚಾಯತಿಗಳಿಗೆ ಅನುದಾನವನ್ನು ಆನ್–ಲೈನ್ ಮುಖಾಂತರ ವರ್ಗಾಯಿಸಲಾಗುತ್ತಿದೆ.

ಇ–ತಂತ್ರಾಂಶದಲ್ಲಿ ಪಂಚತಂತ್ರ ತಂತ್ರಾಂಶವನ್ನು ಗ್ರಾಮ ಪಂಚಾಯತಿ ಹಂತದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

| Cumulative devolution. | Incremental devolution |
|---|---|
| Maharashtra | Karnataka |
| Karnataka | |

## ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಬಲೀಕರಣ ಮತ್ತು ಉತ್ತರದಾಯಿತ್ವವನ್ನು ಪ್ರೋತ್ಸಾಹಿಸುವ ಯೋಜನೆ (PEAIS)

2011–12ನೇ ಸಾಲಿನಿಂದ ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣ ಮತ್ತು ಉತ್ತರದಾಯಿತ್ವವನ್ನು ಪ್ರೋತ್ಸಾಹಿಸುವ ಯೋಜನೆ (PEAIS) ಜಾರಿಯಲ್ಲಿದೆ.

ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ ಜಾರಿಗೊಳಿಸಿದೆ.

ಕರ್ನಾಟಕ ರಾಜ್ಯದಲ್ಲೂ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಯೋಜನೆಯು ಜೂನ್ 2011 ರಿಂದ ಜಾರಿಯಲ್ಲಿದೆ.

ಈ ಯೋಜನೆಯಲ್ಲಿ ಆಡಳಿತ ವಿಕೇಂದ್ರಿಕರಣ ಹಾಗು ಅದರ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗು ಜಿಲ್ಲಾ ಪಂಚಾಯತ್‌ಗಳನ್ನು ಆಯ್ಕೆ ಮಾಡಿ ಉತ್ತೇಜಿಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ರಾಜ್ಯದಲ್ಲೂ ಸಹ ಜಾರಿಗೆ ತರಲಾಗಿದೆ.

ಈ ಯೋಜನೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯವೈಖರಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ, ಸಾಮಾಜಿಕ ಲೆಕ್ಕಪರಿಶೋಧನೆ ಹಾಗು ಇತರೆ ಗುಣಾತ್ಮಕ ವಿಷಯಗಳನ್ನು ಪರಾಮರ್ಶೆಗೆ ಒಳಪಡಿಸಿ ಈ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಗದು ಬಹುಮಾನ ನೀಡಿ ಉತ್ತೇಜಿಸಿ ಪ್ರೋತ್ಸಾಹಿಸುವ ಕಾರ್ಯಕ್ರಮ.

ಕರ್ನಾಟಕ ರಾಜ್ಯದಲ್ಲಿ ಉತ್ತಮ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಮಾನದಂಡಗಳನ್ನು ಪ್ರಮುಖವಾಗಿ ಪರಿಗಣಿಸಲಾಗಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಆಡಳಿತ ವೈಖರಿ.
2. ಪಂಚಾಯತ್ ರಾಜ್ ಸಂಸ್ಥೆಗಳು ಕೈಗೊಳ್ಳುವ ತೀರ್ಮಾನಗಳಲ್ಲಿ ಜನರ ಸಹಭಾಗಿತ್ವ.

3. ಸಾರ್ವಜನಿಕರಿಗೆ ಗುಣಾತ್ಮಕ ಸೇವೆ ಒದಗಿಸುವುದು.

4. ಸಾರ್ವಜನಿಕರಿಗೆ ಪಂಚಾಯತ್ ರಾಜ್ ಸಂಸ್ಥೆಗಳು ಅನುಸರಿಸುತ್ತಿರುವ ಉತ್ತರದಾಯಿತ್ವ ಹಾಗು ಪಾರದರ್ಶಕತೆ.

5. ಸಾಮಾಜಿಕ ಲೆಕ್ಕ ಪರಿಶೋಧನೆ.

- ಕರ್ನಾಟಕ ರಾಜ್ಯಕ್ಕೆ ಒಂದು ಜಿಲ್ಲಾ ಪಂಚಾಯತ್, ಎರಡು ತಾಲ್ಲೂಕು ಪಂಚಾಯತ್ ಹಾಗು ನಾಲ್ಕು ಗ್ರಾಮ ಪಂಚಾಯತಿಗಳನ್ನು ಶ್ರೇಣಿಕರಣ ಮಾಡಲು ಅವಕಾಶವಿತ್ತು. ಅದರಂತೆ, ಮೇಲಿನ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.
- ಪಂಚಾಯತ್ ರಾಜ್ ಸಂಸ್ಥೆಗಳನ್ನು ಶ್ರೇಣಿಕರಣ ಮಾಡುವಾಗ ಬಾಹ್ಯ ಸಂಸ್ಥೆಗಳಿಂದ ಮೌಲ್ಯಮಾಪನ ಮಾಡಿಸಿ ಆಯ್ಕೆ ಮಾಡಲಾಗಿದೆ.
- ಈ ರೀತಿ ಆಯ್ಕೆ ಮಾಡಿದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು 3ನೇ ಸಂಸ್ಥೆಯಿಂದ ಮೌಲ್ಯಮಾಪನ ಮಾಡಿಸಿರುತ್ತದೆ.
- ಈ ಎರಡು ಗುಣಾತ್ಮಕ ಮೌಲ್ಯಮಾಪನದ ನಂತರ ಮೇಲಿನ ಸಂಸ್ಥೆಗಳು ಪಾರದರ್ಶಕತೆ ಹಾಗು ಉತ್ತರದಾಯಿತ್ವದಲ್ಲಿ ಹೆಚ್ಚಿಗೆ ಅಂಕಗಳನ್ನು ಗಳಿಸಿರುತ್ತದೆ.

## 2011-12ನೇ ಸಾಲು

| | |
|---|---|
| ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ | ರೂ.25.00 ಲಕ್ಷ |
| ಕೊಪ್ಪ ತಾಲ್ಲೂಕು ಪಂಚಾಯತ್, ಚಿಕ್ಕಮಗಳೂರು ಜಿಲ್ಲೆ | ರೂ.15.00 ಲಕ್ಷ |
| ಬಸವ ಕಲ್ಯಾಣ ತಾಲ್ಲೂಕು ಪಂಚಾಯತ್ ಬೀದರ ಜಿಲ್ಲೆ | ರೂ.15.00 ಲಕ್ಷ |
| ಇಟ್ಟಮಡು ಗ್ರಾಮ ಪಂಚಾಯತ್, ರಾಮನಗರ ಜಿಲ್ಲೆ | ರೂ.13.00 ಲಕ್ಷ |
| ಘಾಟ್‌ಬೊರಾಳ್ ಗ್ರಾಮ ಪಂಚಾಯತ್, ಬೀದರ ಜಿಲ್ಲೆ | ರೂ.13.00 ಲಕ್ಷ |
| ಗುಮ್ಮಗೋಳ್ ಗ್ರಾಮ ಪಂಚಾಯತ್, ಧಾರವಾಡ ಜಿಲ್ಲೆ | ರೂ.13.00 ಲಕ್ಷ |
| ಮಡಮಕ್ಕಿ ಗ್ರಾಮ ಪಂಚಾಯತ್, ಉಡುಪಿ ಜಿಲ್ಲೆ | ರೂ.13.00 ಲಕ್ಷ |

ಲೈಲಾ ಗ್ರಾಮ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ
(ಗೌರವ ಗ್ರಾಮ ಸಭೆ ಪ್ರಶಸ್ತಿ ಪುರಸ್ಕಾರ) ರೂ.5.00 ಲಕ್ಷ

## 2012-13ನೇ ಸಾಲು

| | |
|---|---|
| ಉಡುಪಿ ಜಿಲ್ಲಾ ಪಂಚಾಯತ್ | ರೂ.40.00 ಲಕ್ಷ |
| ಶಿಕಾರಿಪುರ ತಾಲ್ಲೂಕು ಪಂಚಾಯತಿ | ರೂ.20.00 ಲಕ್ಷ |
| ಕಾರ್ಕಳ ತಾಲ್ಲೂಕು ಪಂಚಾಯತಿ | ರೂ.20.00 ಲಕ್ಷ |
| ಮೇಲಿನಬೆಸಗೆ ಗ್ರಾಮ ಪಂಚಾಯತಿ (ಶಿವಮೊಗ್ಗ ಜಿಲ್ಲೆ) | ರೂ.14.00 ಲಕ್ಷ |
| ಮರವಂತೆ ಗ್ರಾಮ ಪಂಚಾಯತಿ (ಉಡುಪಿ ಜಿಲ್ಲೆ) | ರೂ.14.00 ಲಕ್ಷ |
| ಮುತ್ತುಗ ಗ್ರಾಮ ಪಂಚಾಯತಿ (ಬೆಳಗಾವಿ ಜಿಲ್ಲೆ) | ರೂ.14.00 ಲಕ್ಷ |
| ಕೊಡಂಬಾಲ ಗ್ರಾಮ ಪಂಚಾಯತಿ (ಬೀದರ ಜಿಲ್ಲೆ) | ರೂ.14.00 ಲಕ್ಷ |




# ಹೆಣ್ಣು ಮಕ್ಕಳೂ ಹಾಗೂ ನೂರ ಹನ್ನೊಂದು ಮರಗಳು

ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ.

ಜನನಿ –ಜನ್ಮ ಭೂಮಿಯನ್ನು ಪವಿತ್ರತೆಯಿಂದ ನೋಡಿರುವ ಸಮಾಜದಲ್ಲಿ ಆದ್ಯಾಕೊ ಇತ್ತೀಚಿನ ದಿನಗಳಲ್ಲಿ ಹೆಣ್ಣು ಭ್ರೂಣ ಹತ್ಯೆಯಂತಹ ಹೀನ ಕೃತ್ಯವನ್ನುಎಸೆಗುತ್ತಿರುವುದನ್ನು ನೋಡಿದ್ದೇವೆ. ಇದರಿಂದ ಸಮಾಜದಲ್ಲಿ ಪ್ರಕೃತಿದತ್ತವಾದ ಹೆಣ್ಣು–ಮತ್ತು ಗಂಡಿನ ಅನುಪಾತದಲ್ಲಿ ವ್ಯತ್ಯಾಸ, ಸಮಾಜದಲ್ಲಿಆತಂಕವನ್ನು ಸೃಷ್ಟಿ ಮಾಡಿದೆ.

ಹೆಣ್ಣು ಮಕ್ಕಳು ಜನಸಿದಲ್ಲಿ ಕೀಳಾಗಿ ಕಾಣುವ ಹಲವು ನಿದರ್ಶನಗಳ ನಡುವೆಯೂ ರಾಜಸ್ಥಾನ ರಾಜ್ಯದಲ್ಲಿ ಗ್ರಾಮವೊಂದು ಹುಟ್ಟುವ ಹೆಣ್ಣು ಮಗುವಿನ ಬಗ್ಗೆ ವಿಶಿಷ್ಟ ಸಂಪ್ರದಾಯ ಆರಂಭಿಸಿರುವುದು ನಿಜಕ್ಕೂ ಅಭಿನಂದನಾರ್ಹ ಹಾಗೂ ಅನುಕರಣೀಯ.

ಜನಿಸಿದ ಪ್ರತಿ ಹೆಣ್ಣು ಮಕ್ಕಳಿಗೂ 111 (ನೂರ ಹನ್ನೊಂದು) ಮರ ನೆಡುವುದು ಮತ್ತು ಬೆಳೆಸುವುದು ಸೋಜಿಗದ ಸಂಗತಿ ಆದರೂ ಇದೊಂದು ರಾಜಸ್ಥಾನದ ಗ್ರಾಮ ಪಂಚಾಯ್ತಿನಲ್ಲಿ ನಡೆದಿರುವ ಸತ್ಯದಘಟನೆ.

ದಿನಂಪ್ರತಿ ದಿನಪತ್ರಿಕೆಗಳಲ್ಲಿ ವರದಿಯಾಗುವಂತೆ ಬೆಳಗಿನ ಪತ್ರಿಕೆಯನ್ನು ಓದಲುತೆರೆದೊಡನೆ ಕಣ್ಣಿಗೆ ರಾಚುವ ಸುದ್ದಿಯೆಂದರೆ ಹೆಣ್ಣುಮಕ್ಕಳು ಅನುಭವಿಸುತ್ತಿರುವ ವರದಕ್ಷಿಣೆಯ ಕಿರುಕುಳ, ಅತ್ಯಾಚಾರ, ಕೊಲೆಯಂತಹ ಘಟನೆಗಳು ಬೆಂಕಿಯಿಂದ ಸುಟ್ಟಿರುವ ಘಟನೆಗಳು.ಇದೊಂದುಅಮಾನವೀಯ, ಅಸಹಜ ಹಾಗೂ ಮಾನವ ಕುಲಕ್ಕೆ ಕಳಂಕ ತರುವ ಸಂಗತಿಯಾಗಿದೆ.

ಆದರೆ ಅನೇಕ ಒಳ್ಳೆಯ ವಿಚಾರಗಳನ್ನು ರಾಜಸ್ಥಾನದ ಕೆಲವು ಹಳ್ಳಿಗಳ/ಗ್ರಾಮಗಳು ಪ್ರಾರಂಭಿಸಿ, ಯಶಸ್ವಿ ಕತೆಯನ್ನಾಗಿಸಿವೆ. ರಾಜಸಮಂಡ ಜಿಲ್ಲೆಯ ಗ್ರಾಮವೊಂದು ಅಪರೂಪದ eco-faminenismಅಂದರೆ ಹೆಣ್ಣು ಮಕ್ಕಳಿಗಾಗಿ–ಪರಿಸರ ಅಭಿವೃದ್ಧಿಯಲ್ಲಿ ಅದ್ಬುತವಾದ ಯಶಸ್ಸನ್ನು ಕಂಡಿದೆ.

ಕಳೆದ ಹಲವು ವರ್ಷಗಳಿಂದ "ಪಿಂಪ್ಲಾಂತ್ರಿ" ಗ್ರಾಮ ಪಂಚಾಯ್ತಿನಲ್ಲಿ ಜನಿಸಿದ ಪ್ರತಿ ಹೆಣ್ಣು ಮಕ್ಕಳನ್ನು ರಕ್ಷಿಸುವುದರ ಜೊತೆ–ಜೊತೆಗೆ ಗ್ರಾಮದ ಹಸಿರಿನ ಹೊದಿಕೆಯನ್ನು ಹೆಚ್ಚಿಸಿದೆ. ಹುಟ್ಟಿದ ಪ್ರತಿ ಹೆಣ್ಣು ಮಕ್ಕಳ ಹೆಸರಿನಲ್ಲಿ 111 ಸಸಿಗಳನ್ನು ನೆಟ್ಟು ಅವುಗಳು ಮರಗಳಾಗುವಂತೆ ಗ್ರಾಮದ ಸಮುದಾಯಕ್ರಮ ವಹಿಸಿದೆ. ಹೆಣ್ಣು ಮಕ್ಕಳು ಬೆಳದಂತೆ– ಮರಗಳೂ ಸಹ ಬೆಳೆದು ಫಲ ಕೊಡುವಂತೆ ಕಾಪಾಡುತ್ತಿರುವ ಅಪರೂಪದ ಕಾರ್ಯವನ್ನು ಕಳೆದ 6 ವರ್ಷಗಳಿಂದ ಸದ್ದುಗದ್ದಲವಿಲ್ಲದೆ ಸುಮಾರು 2.5 ಲಕ್ಷ ಮರಗಳನ್ನಾಗಿಸಿದೆ.

ಆ ಗ್ರಾಮದಲ್ಲಿ ಸರಾಸರಿ' 60 ' ಹೆಣ್ಣು ಮಕ್ಕಳು ಪ್ರತಿ ವರ್ಷಜನ್ಮ ತಾಳುತ್ತವೆಂದು ಹಿಂದಿನ ಗ್ರಾಮದ ಪ್ರಧಾನರಾದ ಶ್ರೀ ಶ್ಯಾಂ ಸುಂದರ್ ಪಲಿವಾಲ್‌ರ

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿ., ಬೆಂಗಳೂರು

ಮಾತುಗಳು. ಇವರ ಮಗಳ ಅಕಾಲಿಕ ಮರಣದಿಂದ ಮನನೊಂದ ಪ್ರಧಾನರು ತನ್ನಲ್ಲಿಯ ಮಾನಸಿಕ ನೋವಿನ ನಿವಾರಣೆಗಾಗಿ ಹಾಗೂ ಮಗಳ ನೆನಪು ಸಮಾಜದಲ್ಲಿ ಚಿರಾಯವಾಗಿ ಇರಲಿ ಎನ್ನುವ "ದಿವ್ಯಾಲೋಚನೆಯಿಂದ" ಆಗಿರುವುದಾಗಿದೆ. ಯಾವುದೇ ಒಂದು ಪುಣ್ಯದ ಕೆಲಸ ಮಾಡುವಾಗಲೂ ಅನೇಕ ಸಮಸ್ಯೆಗಳು ಎದುರಾಗುವುದು ಸಹಜ ಆದರೆ ಅಂತಹಎಲ್ಲಾ ಸಮಸ್ಯೆಗಳನ್ನು ನಿಭಾಯಿಸಿಕೊಂಡು ಮುಂದುವರೆದಿದ್ದಾರೆ. ಸಮಾಜದಲ್ಲಿ ಶೇಕಡ ಅರ್ಧದಷ್ಟು ತಂದೆ-ತಾಯಿಗಳು ಹೆಣ್ಣು ಮಕ್ಕಳು ಬೇಡವೇ ಬೇಡ ಎನ್ನುವವರಿದ್ದಾರೆ. ಅಂತಹ ಕುಟುಂಬಗಳನ್ನು ಗ್ರಾಮದ ಸಮುದಾಯದವರೇ ಗುರುತಿಸುತ್ತಾರೆ. ಆ ಕುಟುಂಬಗಳಲ್ಲಿ ಹೆಣ್ಣು ಮಕ್ಕಳು ಜನಿಸಿದಾಗ ಪ್ರತೀ ಮಗುವಿಗೆ ರೂ. 21,000/- ರಷ್ಟು ಹಣವನ್ನು ಗ್ರಾಮಸ್ಥರಿಂದ ಸಂಗ್ರಹಿಸುವರು ಹಾಗೂ ರೂ.10,000/- ನ್ನು ಹೆಣ್ಣುಮಕ್ಕಳ ತಂದೆಯಿಂದ ಪಡೆಯಲಾಗುತ್ತಿದೆ. ಹೀಗೆ ಸಂಗ್ರಹಿದ ಹಣವನ್ನು ಜನಿಸಿದ ಹೆಣ್ಣು ಮಗಳ ಹೆಸರಿನಲ್ಲಿ 20 ವರ್ಷಗಳವರೆಗೆ ಖಾಯಂ ಠೇವಣಿಯಲ್ಲಿ ಇರಿಸಲಾಗುವುದು. ಇಲ್ಲಿಯದೊಂದು ಒಳ್ಳೆಯ ಅಂಶವೆಂದರೆ. ಆ ಹೆಣ್ಣುಮಗಳ ತಂದೆಯಿಂದ ಛಾಪಾಕಾಗದದ ಮೇಲೆ ಆ ಹೆಣ್ಣು ಮಗಳನ್ನು ಯಾವುದೇ ಕಾರಣಕ್ಕೂ ಸರ್ಕಾರ ನಿಗದಿಪಡಿಸಿರುವ ವಯಸ್ಸಿಗಿಂತ ಕಡಿಮೆ ವಯಸ್ಸಿನಲ್ಲಿ ಅಂದರೆ ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಮಾಡುವುದಿಲ್ಲವೆಂದು, ಶಾಲೆಗೆ ಸತತವಾಗಿ ಕಳುಹಿಸಲಾಗುವುದೆಂದು ಹಾಗೂ ಆ ಹೆಣ್ಣು ಮಗಳ ಹೆಸರಿನಲ್ಲಿ ನೆಟ್ಟಿರುವ ಸಸಿಗಳನ್ನು ಮರಗಳಾಗುವಂತೆ ರಕ್ಷಿಸಲಾಗುವುದೆಂದು ಒಪ್ಪಂದ ಬರೆಯಿಸಿ ಕೊಳ್ಳಲಾಗುತ್ತದೆಂದು ಪ್ರಧಾನರು ಹೇಳಿದ್ದಾರೆ.

ಇಷ್ಟೇ ಅಲ್ಲದೇ ಆ ಗ್ರಾಮದಲ್ಲಿ ಮರಣ ಹೊಂದಿದವರ ಹೆಸರಿನಲ್ಲೂ ಸಹ 11 (ಹನ್ನೊಂದು) ಸಸಿಗಳನ್ನು ನೆಡುವ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಆ ಗ್ರಾಮ ಪಂಚಾಯ್ತಿನವರು ಸ್ಟೂಡಿಯೋದಲ್ಲಿ ರೆಕಾರ್ಡ್ ಮಾಡಿಸಿಕೊಂಡಿರುವ ರಾಷ್ಟ್ರಗೀತೆಯನ್ನು ಹಾಗೂ ತನ್ನದೇ ಆದ ವೆಬ್ ಸೈಟ್ ನ್ನು ಹೊಂದಿದೆ (www.pipelantri.com)



ಇನ್ನೂ ಅನೇಕ ಸಮಾಜಕ್ಕೆ ಒಳಿತಾಗುವ ಕಾರ್ಯಗಳಾದ ಮಧ್ಯಪಾನ ನಿಷೇಧ, ಎಲ್ಲೆಂದರಲ್ಲಿ ಜಾನುವಾರು ಮೇಯಿಸುವಿಕೆ (ಓಪನ್‌ಗ್ರೇಜಿಂಗ್) ಹಾಗೂ ಮರಗಳನ್ನು ಕಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ರಾಜಾಸ್ಥಾನದಲ್ಲಿ ನಡೆದಿರುವ ಈ ಘಟನೆಯು ರಾಷ್ಟ್ರದ ಕಣ್ಣು ತೆರೆಸುವಂತಹದ್ದಾಗಿದೆ. ನಡೆದಿರುವ ಕಹಿ ಘಟನೆಯಿಂದ ಎಚ್ಚೆತ್ತುಕೊಂಡ ಗ್ರಾಮದ ಜನರು, ಇಂತಹ ಘಟನೆಗಳು ಪುನಃ ಮರುಕಳಿಸದಂತೆ ಜಾಗೃತಿಯನ್ನು ಮೂಡಿಸಿರುವುದು ಪ್ರಶಂಸನೀಯವಾದದ್ದು ಹಾಗೂ ಪವಿತ್ರವಾದ ಕೆಲಸವೆನ್ನಬಹುದು.

ಬಹುಶಃ ಕರ್ನಾಟಕವು ಪ್ರಸ್ತುತ ವರ್ಷದಲ್ಲಿ ಅನುಭವಿಸಿರುವ ಅತೀವ ಬೇಸಿಗೆ, ಉಷ್ಣಾಂಶದಲ್ಲಿ ಹೆಚ್ಚಳ, ವಿದ್ಯುತ್ ಅಭಾವ ಮತ್ತು ನೀರಿನ ಕೊರತೆ ಎಲ್ಲರನ್ನು ಚಿಂತಿಸುವಂತೆ ಮಾಡಿದೆ. ಈಗಲಾದರೂ ನಮ್ಮಗ್ರಾಮ ಪಂಚಾಯ್ತಿಗಳು (ಸ್ಥಳೀಯ ಸರ್ಕಾರಗಳು) ಎಚ್ಚೆತ್ತುಕೊಂಡು "ಸಾಮಾಜಿಕ ಪರಿಸರ" ಹಾಗೂ "ಭೌತಿಕ ಪರಿಸರ"ವನ್ನು ಸರಿದಾರಿಗೆತರುವಕಾಯಕಲ್ಪವನ್ನು ಮಾಡಬೇಕಿದೆ. ಇಂದು ಜಾಗತೀಕವಾಗಿ ಯೋಚಿಸಿ, ಸ್ಥಳೀಯವಾಗಿ ಕಾರ್ಯೋನ್ಮುಖರಾಗುವುದು ಇಂದಿನ ಅವಶ್ಯಕತೆ ಗಳಲ್ಲೊಂದಾಗಬೇಕಿದೆ. ಕರ್ನಾಟಕದ ಗ್ರಾಮ ಪಂಚಾಯ್ತಿಗಳು ಸಹ ಇಂತಹ ಹತ್ತು ಹಲವಾರು ಒಳ್ಳೆಯ ವಿಚಾರಗಳನ್ನು ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯನ್ನು ಪ್ರದಶಿಸಬಹುದಲ್ಲವೆ!

ಲೇಖನ

# ಗ್ರಾಮ ಪಂಚಾಯತ್ ಆಯ-ವ್ಯಯದ ಉತ್ತಮ ಅನುಷ್ಠಾನ

ಹೆಚ್.ಆರ್. ರಮೇಶ್

ಸ್ಥಳೀಯ ಸಂಸ್ಥೆಯಲ್ಲಿ ಆಯ-ವ್ಯಯ ನಿರ್ವಹಣೆಯ ಬಗ್ಗೆ ಈ ಲೇಖನ

ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರಲ್ಲಿ ವಿಕೇಂದ್ರೀಕರಣದ ತತ್ವದನುಸಾರ ಸ್ಥಳೀಯ ಸರ್ಕಾರವಾದ ಗ್ರಾಮ ಸರ್ಕಾರಕ್ಕೆ ಹಲವು ಅಧಿಕಾರಿಕ ಜವಾಬ್ದಾರಿಗಳನ್ನು ಕೊಟ್ಟಿದೆ. ಇದರ ಪ್ರಕಾರ ಎಲ್ಲಾ ಗ್ರಾಮ ಪಂಚಾಯತ್‌ಗಳು ಫೆಬ್ರುವರಿ ಮೊದಲನೇ ದಿನದಿಂದ ಮಾರ್ಚ್ 10ನೇ ದಿನದವರೆಗೆ ಆಯ-ವ್ಯಯವನ್ನು ಸಿದ್ಧಪಡಿಸಿ ತಾಲೂಕು ಪಂಚಾಯತ್‌ನ ಅನುಮೋದನೆಗೆ ಕಳುಹಿಸಿದ್ದಾಗಿದೆ. ನಂತರ ಮುಂದೇನು!?

## ವಾರ್ಡ್‌ಸಭೆ, ಗ್ರಾಮಸಭೆ :

ಆಯ-ವ್ಯಯವು ತಾಲೂಕು ಪಂಚಾಯತ್‌ನಿಂದ ಅನುಮೋದನೆಯಾಗಿ ಬಂದ ನಂತರ ಗ್ರಾಮ ಪಂಚಾಯತ್‌ಗಳು ಆರ್ಥಿಕ ವರ್ಷದ ಮೊದಲ ವಾರ್ಡ್ ಸಭೆಗಳನ್ನು ಮತ್ತು ಗ್ರಾಮ ಸಭೆಗಳಲ್ಲಿ ಇವುಗಳನ್ನು ಏರ್ಪಡಿಸುವ ಉದ್ದೇಶ, ಮಹತ್ವಗಳನ್ನು ತಿಳಿಸುತ್ತಾ ಗ್ರಾಮದ ಆರೋಗ್ಯ, ಶಿಕ್ಷಣ, ನೈರ್ಮಲ್ಯ, ಪರಿಸರ, ಸಾರ್ವಜನಿಕ ಆಸ್ತಿ ರಕ್ಷಣೆಗೆ, ಸಾಮಾಜಿಕ ಪಿಡುಗುಗಳ ಬಗ್ಗೆ ಅರಿವು ಮೂಡಿಸಿ ಗ್ರಾಮದ ಮೂಲಭೂತ ಸೌಕರ್ಯಗಳು, ಕುಂದುಕೊರತೆಗಳ ಬಗ್ಗೆ ಜನರಿಂದ ಮಾಹಿತಿ ಪಡೆದು ಲಭ್ಯವಿರುವ ಅನುದಾನಗಳಿಗೆ ತಕ್ಕಂತೆ ಸಾರ್ವಜನಿಕ ವೈಯಕ್ತಿಕ ಕಾರ್ಯಕ್ರಮಗಳ ಆದ್ಯತಾ ಪಟ್ಟಿ ರೂಪಿಸಬೇಕಾಗುತ್ತದೆ. ಯಾವುದೇ ಕಾರ್ಯಕ್ರಮ, ಕಾಮಗಾರಿ, ಫಲಾನುಭವಿಗಳ ಆಯ್ಕೆ ಗ್ರಾಮಸಭೆಯ ಅಧಿಕಾರ.

## ಕ್ರಿಯಾಯೋಜನೆ :

ಆಯ-ವ್ಯಯಕ್ಕೆ ಅನುಗುಣವಾಗಿ ಕ್ರಿಯಾಯೋಜನೆಯ ಆದ್ಯತಾ ಪಟ್ಟಿಯನ್ನು ಗ್ರಾಮಸಭೆಯಲ್ಲಿಯೇ ತಯಾರಿಸಬೇಕಾಗುತ್ತದೆ. ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ (ಉದಾ: 13ನೇ ಹಣಕಾಸು, ವರ್ಗ-1, ಸ್ವಚ್ಛ ಗ್ರಾಮ, ಪಶ್ಚಿಮ ಘಟ್ಟ, ವಿವಿಧ ಯೋಜನೆಗಳ ಫಲಾನುಭವಿಗಳ ಆಯ್ಕೆ) ಮಾರ್ಗಸೂಚಿಗನುಗುಣವಾಗಿ ಲಭ್ಯ ಅನುದಾನಕ್ಕನುಗುಣವಾಗಿ ಕ್ರಿಯಾಯೋಜನೆ ತಯಾರಿಸಬೇಕಾಗಿರುತ್ತದೆ.

## ವರ್ಗ-1ರ ಕ್ರಿಯಾಯೋಜನೆ ತಯಾರಿಸುವಾಗ ಗಮನಿಸಬೇಕಾದ ಅಂಶಗಳು :

ಗ್ರಾಮ ಪಂಚಾಯತ್‌ಗಳು ಆಯ-ವ್ಯಯವನ್ನು ತಯಾರಿಸುವಾಗ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತ್ತನ್ನು ಕೊಡುತ್ತಿರುವುದು ಉತ್ಪಾದನಾ ವಲಯ, ಸಾಮಾಜಿಕ ವಲಯ (ಶಿಕ್ಷಣ, ಆರೋಗ್ಯ, ಮಾನವಾಭಿವೃದ್ಧಿ ಇನ್ನಿತರೆ) ಕಡೆಗಣಿಸಿರುವುದು ಕಂಡುಬರುವುದು ಸಾಮಾನ್ಯ. ಗ್ರಾಮೀಣ ಮಟ್ಟದಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಾದ ನೀರು, ರಸ್ತೆ, ವಿದ್ಯುತ್, ಚರಂಡಿ ವ್ಯವಸ್ಥೆಗಳನ್ನು

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಾವುಂದ ಗ್ರಾಮ ಪಂಚಾಯಿತಿ,
ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ

ಸಮರ್ಪಕವಾಗಿ ರೂಪಿಸಲು ಸಾಧ್ಯವಾಗದೇ ಅಥವಾ ಹಣಕಾಸಿನ ಸಮಸ್ಯೆಗಳ ಕಾರಣವಾಗಿವೆ. ಆದ್ದರಿಂದ ಗ್ರಾಮ ಸರ್ಕಾರಗಳ ಅಭಿವೃದ್ಧಿಯೆಂದರೆ ಮೂಲಭೂತ ಸೌಕರ್ಯ ಒಂದೇ ಎಂಬ ಭಾವನೆ ಹೋಗಲಾಡಿಸಿ ಶಿಕ್ಷಣ, ಆರೋಗ್ಯದಂತಹ ಸಾಮಾಜಿಕ ವಲಯ ಮತ್ತು ಉತ್ಪಾದನಾ ವಲಯಗಳಿಗೆ ಪೂರಕವಾದ ಕೃಷಿಗೆ ಸಂಬಂಧಿಸಿದಂತೆ ಅಭಿವೃದ್ಧಿಯೊಂದಿಗೆ ಮಾನವ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಬೇಕಿದೆ.

**ಆಯ-ವ್ಯಯದಲ್ಲಿ ಕಡ್ಡಾಯವಾಗಿ ಅನುದಾನ ಕಾಯ್ದಿರಿಸಿ ತಯಾರಿಸಬೇಕಾದ ಕ್ರಿಯಾಯೋಜನೆಗಳು :**

1. ಶೇ.25 ಅಥವಾ ಶೇ. 22.75
2. ಶೇ.3 ಅಂಗವಿಕಲರ ಕಲ್ಯಾಣನಿಧಿಗೆ
3. ಶೇ.2 ಯುವಜನೋತ್ಸವಕ್ಕೆ
4. ಶೇ.6 ಅರಣ್ಯೀಕರಣ
5. ಮುಂದುವರಿಕಾ ಶಿಕ್ಷಣ ಅಥವಾ ವಯಸ್ಕರ ಶಿಕ್ಷಣ=25000.00

ಸ್ಥಳೀಯ ಸರ್ಕಾರಗಳು ಆಯ-ವ್ಯಯ ತಯಾರಿಸುವಾಗ ಕಡ್ಡಾಯವಾಗಿ ಸರ್ಕಾರದ ಮಾರ್ಗಸೂಚಿಗನುಗುಣವಾಗಿ ಅನುದಾನಗಳನ್ನು ಕಾಯ್ದಿರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿರುವುದು ಸಾಮಾನ್ಯ. ಆದರೆ ಇಂದು ಬಹುತೇಕ ಗ್ರಾಮ ಪಂಚಾಯತ್‌ಗಳು ಶೇ.25 ಹೊರತು ಮೇಲಿನ ಬೇರೆ ಯಾವುದೇ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದಂತೆ ಕಂಡುಬರುವುದಿಲ್ಲ. ಆದ್ದರಿಂದ ಗ್ರಾಮ ಮಟ್ಟದಲ್ಲಿ ನಾವುಗಳು ಈ ಕಾರ್ಯಕ್ರಮಗಳ ಯಶಸ್ಸಿಗೆ ಶ್ರಮಿಸಬೇಕಾಗಿದೆ.

**1. ಶೇ.25 ಅಥವಾ ಶೇ.22.75 :**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಕಲ್ಯಾಣಕ್ಕಾಗಿ ಸಂವಿಧಾನ ರಚನೆಗೊಂಡಾಗ ಹತ್ತು ವರ್ಷಗಳಿಗೆ ಮಾತ್ರ ಮೀಸಲಿರಿಸಿದ ಮೀಸಲಾತಿ ಆರು ದಶಕಗಳು ಕಳೆದರೂ ಮುಂದುವರಿಯುತ್ತಾ ಬಂದಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡ ಎಷ್ಟೇ ಮೀಸಲಾತಿ ದೊರೆತರೂ ಸಮರ್ಪಕ ಕಾರ್ಯಕ್ರಮಗಳ ಏರ್ಪಾಡು ಮತ್ತು ಅನುಷ್ಠಾನದ ಕೊರತೆಯಿಂದ ಪ್ರಗತಿಯ ಮಟ್ಟದಲ್ಲಿ ಕುಂಠಿತವನ್ನು ಕಾಣುತ್ತೇವೆ. ಆದುದರಿಂದ ಇಂದಿನ ಗ್ರಾಮ ಪಂಚಾಯತ್‌ನ ಲಭ್ಯ ಅನುದಾನಕ್ಕನುಗುಣವಾಗಿ ಸಮಗ್ರ ಕ್ರಿಯಾಯೋಜನೆಗಳನ್ನು ರೂಪಿಸಿ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. (ಶೇ.25 ಅಥವಾ ಶೇ.22.75ರ ಮಧ್ಯೆ ಗೊಂದಲವಿದೆ. ಗ್ರಾಮ ಪಂಚಾಯತ್‌ನ ಸ್ವಂತ ಸಂಪನ್ಮೂಲಗಳ ಆದಾಯದಲ್ಲಿ ಶೇ.25ನ್ನು ಮತ್ತು ಶಾಸನಬದ್ಧ ಅನುದಾನದಿಂದ ಶೇ.22.75ನ್ನು ತೆಗೆದುಕೊಳ್ಳಬಹುದಾಗಿದ್ದು ಒಟ್ಟಾರೆ ಎರಡರಿಂದಲೂ ಶೇ.25ರ ಮಾನದಂಡವಾಗಿ ತೆಗೆದುಕೊಳ್ಳುತ್ತಿದ್ದೇವೆ ಹಾಗೂ ಶೇ.25 ಅಥವಾ ಶೇ.22.75ರಲ್ಲಿ ರಾಜ್ಯ ಸರ್ಕಾರ ಪ.ಜಾತಿ ಪ.ಪಂಗಡಗಳಿಗೆ ವಿಂಗಡಣೆಯಾದ 16.20+6.55= 22.75ರಂತೆ ಗ್ರಾಮ ಪಂಚಾಯತ್‌ಗಳಿಗೆ ವಿಂಗಡಣೆ ಅಥವಾ ಹಂಚಿಕೆ ಇಲ್ಲ. ಹಾಗಾಗಿ ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಪ.ಜಾತಿ ಹೆಚ್ಚಿದ್ದು ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಪ.ಪಂಗಡ ಹೆಚ್ಚಿರುವುದರಿಂದ ಆಯಾ ಗ್ರಾಮ ಪಂಚಾಯತ್‌ಗಳು ತೆಗೆದುಕೊಳ್ಳುವ ನಿರ್ಧಾರವು ಅಂತಿಮವಾಗಿರುತ್ತದೆ.) ಶೇ.25ರ ಅನುದಾನವನ್ನು ಖರ್ಚು ಮಾಡುವ ಮೊದಲು ಆಯಾ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿನ ಪ.ಜಾತಿ ಪ.ಪಂಗಡ ಕುಟುಂಬಗಳ ಸಮಗ್ರ ಪಟ್ಟಿಯನ್ನು ಸಮರ್ಪಕವಾಗಿ ಮಾಡಿಟ್ಟುಕೊಂಡಿರಬೇಕಾಗುತ್ತದೆ. ಕಾರಣ ಸಮರ್ಪಕ ಅನುಷ್ಠಾನಕ್ಕೆ ಮತ್ತು ಸೌಲಭ್ಯ ವಂಚಿತರಿಗೆ ನೆರವು ನೀಡಲು ಅನುಕೂಲವಾಗುತ್ತದೆ.

ಶೇ.25ರ ಕ್ರಿಯಾಯೋಜನೆ ರೂಪಿಸುವಾಗ ಫಲಾನುಭವಿಗಳ ಆಯ್ಕೆ ಮಾಡುವಾಗ ಶೇ.25ರಲ್ಲಿ ಶೇ.40ನ್ನು ಶೈಕ್ಷಣಿಕ ವಲಯಕ್ಕೆ, ಶೇ.40ನ್ನು ಆರ್ಥಿಕ ಚಟುವಟಿಕೆಗೆ, ಶೇ.20ನ್ನು ಮೂಲಭೂತ ಸೌಕರ್ಯ ವಲಯಕ್ಕೆ ಮೀಸಲಿಡಬೇಕಾಗುತ್ತದೆ. ಆದರೂ ಇಂದಿನ ದಿನಗಳಲ್ಲಿ ಶೈಕ್ಷಣಿಕ ವಲಯಕ್ಕೆ ಹೆಚ್ಚಿನ ಒತ್ತು ಕೊಡುವುದು ಅತೀ ಮುಖ್ಯವಾಗಿದೆ.

ಶೇ.25ರಲ್ಲಿ ನೀಡಬಹುದಾದ ಸೇವೆಗಳು :

**ಶೈಕ್ಷಣಿಕ ವಲಯಕ್ಕೆ (ಶೇ.40) :**

- ಮೆಟ್ರಿಕ್ ನಂತರ ಪದವಿಪೂರ್ವ, ಪದವಿ, ಸ್ನಾತಕೋತ್ತರ, ತಾಂತ್ರಿಕ, ವೈದ್ಯಕೀಯ ಮುಂತಾದ ಉನ್ನತ

ಅನುದಾನಕ್ಕನುಗುಣವಾಗಿ ಕ್ರಿಯಾಯೋಜನೆ ತಯಾರಿಸಬೇಕಾಗಿರುತ್ತದೆ.

## ವರ್ಗ-1ರ ಕ್ರಿಯಾಯೋಜನೆ ತಯಾರಿಸುವಾಗ ಗಮನಿಸಬೇಕಾದ ಅಂಶಗಳು :

ಗ್ರಾಮ ಪಂಚಾಯತ್‌ಗಳು ಆಯ-ವ್ಯಯವನ್ನು ತಯಾರಿಸುವಾಗ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಒತ್ತನ್ನು ಕೊಡುತ್ತಿರುವುದು ಉತ್ಪಾದನಾ ವಲಯ, ಸಾಮಾಜಿಕ ವಲಯ (ಶಿಕ್ಷಣ, ಆರೋಗ್ಯ, ಮಾನವಾಭಿವೃದ್ಧಿ ಇನ್ನಿತರೆ) ಕಡೆಗಣಿಸಿರುವುದು ಕಂಡುಬರುವುದು ಸಾಮಾನ್ಯ. ಗ್ರಾಮೀಣ ಮಟ್ಟದಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಾದ ನೀರು, ರಸ್ತೆ, ವಿದ್ಯುತ್, ಚರಂಡಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ರೂಪಿಸಲು ಸಾಧ್ಯವಾಗದೇ ಅಥವಾ ಹಣಕಾಸಿನ ಸಮಸ್ಯೆಗಳ ಕಾರಣವಾಗಿವೆ. ಆದ್ದರಿಂದ ಗ್ರಾಮ ಸರ್ಕಾರಗಳ ಅಭಿವೃದ್ಧಿಯೆಂದರೆ ಮೂಲಭೂತ ಸೌಕರ್ಯ ಒಂದೇ ಎಂಬ ಭಾವನೆ ಹೋಗಲಾಡಿಸಿ ಶಿಕ್ಷಣ, ಆರೋಗ್ಯದಂತಹ ಸಾಮಾಜಿಕ ವಲಯ ಮತ್ತು ಉತ್ಪಾದನಾ ವಲಯಗಳಿಗೆ ಪೂರಕವಾದ ಕೃಷಿಗೆ ಸಂಬಂಧಿಸಿದಂತೆ ಅಭಿವೃದ್ಧಿಯೊಂದಿಗೆ ಮಾನವ ಅಭಿವೃದ್ಧಿಯನ್ನು ಸಾಧಿಸಲು ಪ್ರಯತ್ನಿಸಬೇಕಿದೆ.

## ಆಯ-ವ್ಯಯದಲ್ಲಿ ಕಡ್ಡಾಯವಾಗಿ ಅನುದಾನ ಕಾಯ್ದಿರಿಸಿ ತಯಾರಿಸಬೇಕಾದ ಕ್ರಿಯಾಯೋಜನೆಗಳು

1. ಶೇ.25 ಅಥವಾ ಶೇ. 22.75
2. ಶೇ.3 ಅಂಗವಿಕಲರ ಕಲ್ಯಾಣನಿಧಿಗೆ
3. ಶೇ.2 ಯುವಜನೋತ್ಸವಕ್ಕೆ
4. ಶೇ.6 ಅರಣ್ಯೀಕರಣ
5. ಮುಂದುವರಿಕಾ ಶಿಕ್ಷಣ ಅಥವಾ ವಯಸ್ಕರ ಶಿಕ್ಷಣ=25000.00

ಸ್ಥಳೀಯ ಸರ್ಕಾರಗಳು ಆಯ-ವ್ಯಯ ತಯಾರಿಸುವಾಗ ಕಡ್ಡಾಯವಾಗಿ ಸರ್ಕಾರದ ಮಾರ್ಗಸೂಚಿಗನುಗುಣವಾಗಿ ಅನುದಾನಗಳನ್ನು ಕಾಯ್ದಿರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿರುವುದು ಪಂಚಾಯತ್‌ಗಳು ಶೇ.25 ಹೊರತು ಮೇಲಿನ ಬೇರೆ ಯಾವುದೇ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದಂತೆ ಕಂಡುಬರುವುದಿಲ್ಲ. ಆದ್ದರಿಂದ ಗ್ರಾಮ ಮಟ್ಟದಲ್ಲಿ ನಾವುಗಳು ಈ ಕಾರ್ಯಕ್ರಮಗಳ ಯಶಸ್ಸಿಗೆ ಶ್ರಮಿಸಬೇಕಾಗಿದೆ.

## 1. ಶೇ.25 ಅಥವಾ ಶೇ.22.75 :

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನರ ಕಲ್ಯಾಣಕ್ಕಾಗಿ ಸಂವಿಧಾನ ರಚನೆಗೊಂಡಾಗ ಹತ್ತು ವರ್ಷಗಳಿಗೆ ಮಾತ್ರ ಮೀಸಲಿರಿಸಿದ ಮೀಸಲಾತಿ ಆರು ದಶಕಗಳು ಕಳೆದರೂ ಮುಂದುವರಿಯುತ್ತಾ ಬಂದಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡ ಎಷ್ಟೇ ಮೀಸಲಾತಿ ದೊರೆತರೂ ಸಮರ್ಪಕ ಕಾರ್ಯಕ್ರಮಗಳ ಏರ್ಪಾಡು ಮತ್ತು ಅನುಷ್ಠಾನದ ಕೊರತೆಯಿಂದ ಪ್ರಗತಿಯ ಮಟ್ಟದಲ್ಲಿ ಕುಂಠಿತವನ್ನು ಕಾಣುತ್ತೇವೆ. ಆದುದರಿಂದ ಇಂದಿನ ಗ್ರಾಮ ಪಂಚಾಯತ್‌ನ ಲಭ್ಯ ಅನುದಾನಕ್ಕನುಗುಣವಾಗಿ ಸಮಗ್ರ ಕ್ರಿಯಾಯೋಜನೆಗಳನ್ನು ರೂಪಿಸಿ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. (ಶೇ.25 ಅಥವಾ ಶೇ.22.75ರ ಮಧ್ಯೆ ಗೊಂದಲವಿದೆ. ಗ್ರಾಮ ಪಂಚಾಯತ್‌ನ ಸ್ವಂತ ಸಂಪನ್ಮೂಲಗಳ ಆದಾಯದಲ್ಲಿ ಶೇ.25ನ್ನು ಮತ್ತು ಶಾಸನಬದ್ಧ ಅನುದಾನದಿಂದ ಶೇ.22.75ನ್ನು ತೆಗೆದುಕೊಳ್ಳಬ ಹುದಾಗಿದ್ದು ಒಟ್ಟಾರೆ ಎರಡರಿಂದಲೂ ಶೇ.25ರ ಮಾನದಂಡವಾಗಿ ತೆಗೆದುಕೊಳ್ಳುತ್ತಿದ್ದೇವೆ ಹಾಗೂ ಶೇ.25 ಅಥವಾ ಶೇ.22.75ರಲ್ಲಿ ರಾಜ್ಯ ಸರ್ಕಾರ ಪ.ಜಾತಿ ಪ.ಪಂಗಡಗಳಿಗೆ ವಿಂಗಡಣೆಯಾದ 16.20+6.55= 22.75ರಂತೆ ಗ್ರಾಮ ಪಂಚಾಯತ್‌ಗಳಿಗೆ ವಿಂಗಡಣೆ ಅಥವಾ ಹಂಚಿಕೆ ಇಲ್ಲ. ಹಾಗಾಗಿ ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಪ.ಜಾತಿ ಹೆಚ್ಚಿದ್ದು ಕೆಲವು ಗ್ರಾಮ ಪಂಚಾಯತ್‌ಗಳಲ್ಲಿ ಪ.ಪಂಗಡ ಹೆಚ್ಚಿರುವುದರಿಂದ ಆಯಾ ಗ್ರಾಮ ಪಂಚಾಯತ್‌ಗಳು ತೆಗೆದುಕೊಳ್ಳುವ ನಿರ್ಧಾರವು ಅಂತಿಮವಾಗಿರುತ್ತದೆ.) ಶೇ.25ರ ಅನುದಾನವನ್ನು ಖರ್ಚು ಮಾಡುವ ಮೊದಲು ಆಯಾ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿನ ಪ.ಜಾತಿ ಪ.ಪಂಗಡ ಕುಟುಂಬಗಳ ಸಮಗ್ರ ಪಟ್ಟಿಯನ್ನು

ಶಿಕ್ಷಣಕ್ಕೆ ಅವರ ಶಿಕ್ಷಣಕ್ಕನುಗುಣವಾಗಿ ಅಗತ್ಯ ಪಠ್ಯ ಪುಸ್ತಕ, ಶಿಕ್ಷಣ ಶುಲ್ಕ ಭರಿಸಲು, ಸಲಕರಣೆಗಳನ್ನು ಕೊಳ್ಳಲು ಆರ್ಥಿಕ ಸಹಾಯ ಮಾಡಬಹುದಾಗಿದೆ. ➤ ಪ' ದ' ವಿ ಅಥವಾ ಉನ್ನತ ಶಿಕ್ಷಣ ಮುಗಿಸಿದ ಅಭ್ಯರ್ಥಿಗಳಿಗೆ ಕೇಂದ್ರ ಅಥವಾ ರಾಜ್ಯ ಲೋಕಸೇವಾ ಆಯೋಗದಡಿ ನಡೆಸುವ ಪರೀಕ್ಷೆಗಳಿಗೆ ತರಬೇತಿಯನ್ನು ಕೊಡಿಸಬಹುದು ಇದಕ್ಕೆ ಸಂಬಂಧಿಸಿದ ಹಾಗೂ ಇನ್ನಿತರ ವಿದ್ಯಾಭ್ಯಾಸದ ಪೂಕವಾದ ಪ್ರಯಾಣದ ವೆಚ್ಚಗಳನ್ನು ಭರಿಸಲು ಅವಕಾಶ ಮಾಡಿಕೊಡಬಹುದಾಗಿದೆ.

➤ ಪಠ್ಯ ಪೂರಕ ಚಟುವಟಿಕೆಗಳಾದ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಸಾಂಸ್ಕೃತಿ ಮತ್ತು ಭಾಷಣ ಸ್ಪರ್ಧೆಗಳನ್ನು ಭಾಗವಹಿಸಲು ಪ್ರಯಾಣವೆಚ್ಚ ನೀಡಬಹುದಾಗಿದೆ.

**ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ (ಶೇ.40) :**

ಉದ್ಯೋಗಾಧಾರಿತ ತರಬೇತಿಗಳಾದ ವಾಹನ ಚಾಲನೆ ತರಬೇತಿ, ಕಂಪ್ಯೂಟರ್ ಕಂಪ್ಯೂಟರ್ ತರಬೇತಿ, ಕುಶಲ ಕೈಗಾರಿಕೆಗಳ ತರಬೇತಿ, ಬ್ಯೂಟೀಶನ್, ಹೊಲಿಗೆ ತರಬೇತಿಗಳನ್ನು ಕೊಡಿಸಬಹುದು ಹಾಗೂ ಬಡಕುಟುಂಬಗಳಿಗೆ ಆದಾಯಭರಿತ ಗ್ರಾಮ ಪಂಚಾಯತ್‌ಗಳು ಇವರ ತರಬೇತಿಗೆ ಪೂರಕವಾದ ಸರಕು ಸಾಮಾಗ್ರಿಗಳ ಖರೀದಿಗೆ, ಆಸ್ತಿ ಖರೀದಿಗೆ, ಸೃಜನೆಗೆ, ಕೃಷಿಕ ಪೂರಕ ಚಟುವಟಿಕೆಗೆ ನೆರವಾಗಿ ಸ್ವಾವಲಂಭಿಗಳಾಗಲು ಸಹಾಯಧನ ನೀಡಬಹುದು.

**ಮೂಲಭೂತ ಸೌಕರ್ಯ (ಶೇ.20) :**

ಮೊದಲ ಪ್ರಾಶಸ್ತ್ಯವಾಗಿ ಮನೆ ರಚನೆಗೆ, ವಿದ್ಯುತ್ತೀಕರಣ, ಕುಡಿಯುವ ನೀರು, ರಸ್ತೆ ಸಂಪರ್ಕಕ್ಕೆ, ಜೈವಿಕ ಇಂಧನ ಟ್ಯಾಂಕ್ ನಿರ್ಮಿಸಲು ಅಥವಾ ಗ್ಯಾಸ್ ಸಂಪರ್ಕ ಕಲ್ಪಿಸಲು ಆರ್ಥಿಕ ಸಹಾಯ ಮಾಡಬಹುದು. ಇದಲ್ಲದೆ ಆರೋಗ್ಯ ಪೂರಕವಾಗಿ ಶಸ್ತ್ರಚಿಕಿತ್ಸೆ ಔಷಧೋಪಚಾರ ಪರಿಕರಗಳನ್ನು ಖರೀದಿಸಲು ಸಹಾಯಧನ ನೀಡಬಹುದು. ಗ್ರಾಮ ಪಂಚಾಯತ್‌ಗಳು ಸ್ಪಷ್ಟ ಮುನ್ನೋಟ ಇಟ್ಟುಕೊಂಡರೆ ಸಾಮಾಜಿಕ ಕಲ್ಯಾಣದ ಅರ್ಥ ಸಾರ್ಥಕವಾಗುತ್ತದೆ.

**2. ಶೇ.3 ವಿಕಲಚೇತನರ ಕಲ್ಯಾಣನಿಧಿ :**

ಹುಟ್ಟಿನಿಂದಲೇ ಅಥವಾ ಅವಗಡಗಳಿಂದ ಆಕಸ್ಮಿಕವಾಗಿ ವಿಕಲರಾದ ನಮ್ಮ ಮಧ್ಯೆಯೇ ಇರುವವರನ್ನು ಗುರುತಿಸಿ ಅಂತವರಿಗೆ ಮೀಸಲಾದ ಅನುದಾನವನ್ನು ವಿನಿಯೋಗಿಸಿ ಅವರ ಏಳಿಗೆಗಾಗಿ ಚರ್ಚೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸದರಿ ಅನುದಾನವನ್ನು ಬಳಸುವ ಮೊದಲು ಗ್ರಾಮದಲ್ಲಿರುವ ವಿಕಲಚೇತನರ ಪಟ್ಟಿಯನ್ನು ಸರಿಯಾದ ರೀತಿಯಲ್ಲಿ ತಯಾರಿಸಿಕೊಂಡು ಶೇ.70, ಶೇ.80 ಅಂಗವಿಕಲತೆ ಇರುವವರಿಗೆ ಆದ್ಯತೆಯ ಮೇಲೆ ಅವರಿಗೆ ಅವಶ್ಯವಿರುವ ಮೂಲಭೂತ ಸೌಕರ್ಯ, ಆರೋಗ್ಯಕ್ಕೆ ಸಂಬಂಧಿಸಿದಂತೆ, ಅವರು ಆರ್ಥಿಕವಾಗಿ ಸಬಲರಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಗ್ರಾಮಸಭೆಯಲ್ಲಿ ಆಯ್ಕೆ ಮಾಡಿ ಶೇ.3ರ ಅನುದಾನವನ್ನು ಸಮರ್ಪಕವಾಗಿ ಬಳಸಿ ಅವರ ಏಳಿಗೆಗಾಗಿ ಶ್ರಮಿಸಬೇಕಾಗಿದೆ.

**ವಿಕಲಚೇತನರಿಗೆ ನೀಡಬಹುದಾದ ಸೌಲಭ್ಯಗಳು :**

1. ಅಂಗವಿಕಲರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ ನೀಡಬೇಕು.
2. ಉನ್ನತ ವಿದ್ಯಾಭ್ಯಾಸಕ್ಕೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಆರ್ಥಿಕ ಸಹಾಯಧನ ನೀಡಬೇಕು.
3. ಬೋಧನಾ ಮತ್ತು ಕಲಿಕಾ ಸಾಮಾಗ್ರಿಗಳಿಗೆ ಸಹಾಯಧನ ನೀಡುವುದು. ಉದಾ: ಬ್ರೈಲ್ ಕಿಟ್, ಟೇಪ್ ರಿಕಾರ್ಡ್‌ರ್, ಸಿ.ಡಿ./ಡಿ.ವಿ.ಡಿ. ಪ್ಲೇಯರ್ ತಂತ್ರಾಂಶಗಳ ಮೂಲಕ ಸಂವನ ಕೌಶಲ್ಯ ಹೆಚ್ಚಿಸಲು ಮತ್ತು ಶಬ್ದ ಗ್ರಂಥಾಲಯ ಸ್ಥಾಪಿಸಲು ಸಹಾಯ. ಕೌಶಲ್ಯ ತರಬೇತಿ ನಡೆಸುವುದು ಹಾಗೂ ಅದಕ್ಕೆ ಸಂಬಂಧಪಟ್ಟ ಶಿಬಿರಗಳನ್ನು, ಜಾಥಾಗಳನ್ನು ನಡೆಸುವುದು.
4. ಉದ್ಯೋಗದ ಮಾರ್ಗದರ್ಶನ, ತರಬೇತಿ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಸಾಮಾಗ್ರಿಗಳನ್ನು ಒದಗಿಸುವುದು.
5. ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಮತ್ತು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳ ಬಲವರ್ಧನೆ ಮಾಡುವುದು.
6. ವೈಯಕ್ತಿಕ ಅಭಿವೃದ್ಧಿಗಾಗಿ ನಿವೇಶನ, ಸ್ವಯಂ-ಉದ್ಯೋಗಕ್ಕೆ, ವಸತಿ, ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡುವುದು.
7. ವೈದ್ಯಕೀಯ ಪುನರ್ವಸತಿಯಡಿ ಶಸ್ತ್ರಚಿಕಿತ್ಸೆ,

ಮನೋಚಿಕಿತ್ಸೆ, ಔಷಧಿಗಾಗಿ ಸಹಾಯಧನ ನೀಡುವುದರೊಂದಿಗೆ ಸಾಧನ ಪರಿಕರಗಳಾದ ಕೃತಕ ಅಂಗಾಂಗಗಳು, ಕಂಕುಳು ದೊಣ್ಣೆ, ಕನ್ನಡಕ, ಶ್ರವಣ ಯಂತ್ರ, ಗಾಲಿಕುರ್ಚಿ, ತ್ರಿಚಕ್ರ ವಾಹನ ಮುಂತಾದುವುಗಳಿಗೆ ಆರ್ಥಿಕ ಸಹಾಯಧನ ನೀಡಬಹುದು.

**3. ಶೇ.2ರ ಯುವಜನೋತ್ಸವ ಅಥವಾ ಸಂಬಂಧಿಸಿದ ಕಾರ್ಯಕ್ರಮಗಳು :**

ಗ್ರಾಮೀಣ ಪ್ರದೇಶಗಳಲ್ಲಿ ಶೇ.50ಕ್ಕಿಂತ ಯುವಜನತೆಯಿಂದ ಕೂಡಿದೆ. ಗ್ರಾಮೀಣ ಭಾಗದಲ್ಲಿ ಯುವಕರನ್ನು ಸಂಘಟಿಸುವ ಅವರಲ್ಲಿರುವ ಕ್ರೀಡೆ, ಸಾಂಸ್ಕೃತಿಕ, ಸಾಮಾಜಿಕ ಇತ್ಯಾದಿ ಕ್ಷೇತ್ರಗಳ ಪ್ರತಿಭೆಯನ್ನು ಬೆಳಕಿಗೆ ತರುವುದು ನಮ್ಮ ಹೊಣೆಯಾಗಿದೆ ಹಾಗೂ ಸಾಮಾಜಿಕ ಅಸಮಾನತೆ ಯುವಕರ ವಲಸೆ, ಕೋಮು ಗಲಭೆಗಳಂತಹ ಪ್ರಕರಣಗಳನ್ನು ಹೋಗಲಾಡಿಸಿ ಗ್ರಾಮದ ಅಭಿವೃದ್ಧಿಗೆ ಅವರ ಸಹಭಾಗಿತ್ವನ್ನು ಪಡೆಯಬಹುದಾಗಿದೆ. ಇದರ ಮಹತ್ವವನ್ನು ಅರಿಯಬೇಕಾದರೆ ಕೆಲವು ತಿಂಗಳ ಹಿಂದೆ ಮಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಯುವಜನೋತ್ಸವದ ಮಹತ್ವ ಮತ್ತು ಪ್ರಭಾವವನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಶೇ.2ರಲ್ಲಿ ಗ್ರಾಮಮಟ್ಟದ, ತಾಲೂಕು ಮಟ್ಟದ, ಜಿಲ್ಲಾ ಮಟ್ಟದ ಯುವಜನ ಮೇಳಗಳನ್ನು ಹಮ್ಮಿಕೊಂಡು ಅಥವಾ ಅದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಗ್ರಾಮ ಮಟ್ಟದಲ್ಲಿ ಯಶಸ್ವಿಗೊಳಿಸಬೇಕಾಗಿದೆ.

**4. ಶೇ.6ರ ಅರಣ್ಯೀಕರಣ :**

ಭೂಮಿಯ ಮೇಲೆ ಅಗತ್ಯವಾಗಿ ಶೇ.33ರ ಅರಣ್ಯವಿರಬೇಕು. ಆದರೆ ಇಂದು ಪ್ರಪಂಚದ್ಯಾಂತ ಸರಾಸರಿ ಸುಮಾರು ಶೇ.20ರಷ್ಟು ಮಾತ್ರ ಅರಣ್ಯವಿದೆ. ಆಧುನಿಕ ಯುಗದ ಅಭಿವೃದ್ಧಿಯ ಭರಾಟೆಯಲ್ಲಿ ನಾವು ಅರಣ್ಯ ಪ್ರದೇಶವನ್ನು ನಾಶ ಮಾಡಿ ನಮ್ಮ ವಿನಾಶಕ್ಕೆ ನಾವೇ ಒಂದು ರೀತಿಯಲ್ಲಿ ಕಾರಣವಾಗುತ್ತಿದ್ದೇವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ಅರಣ್ಯೀಕರಣದ ಯೋಜನೆಗಳನ್ನು ಹಾಕಿಕೊಂಡಿದ್ದರೂ ನಿರೀಕ್ಷಿಸಿದಷ್ಟು ಪ್ರಗತಿ ಕಾಣದಿರುವುದನ್ನು ನಾವು ನೋಡುತ್ತಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಅಭಿವೃದ್ಧಿ ಇಲ್ಲವೇ ವಿನಾಶ ಎಂಬ ನಾಣ್ಣುಡಿಯನ್ನು ಅರ್ಥಶಾಸ್ತ್ರಜ್ಞರು ನೀಡುತ್ತಿದ್ದ ಹೇಳಿಕೆಯಾಗಿತ್ತು. ಆದರೆ ಇಂದು ನಾವು ಅಭಿವೃದ್ಧಿ ಪಥದಲ್ಲಿ ಸಾಗಲು ಅರಣ್ಯೀರಣವನ್ನು ಕಡೆಗಣಿಸಿ ಅದರ ಫಲವನ್ನು ನಾವು ಪ್ರಕೃತಿ ವಿಕೋಪ, ಬರಗಾಲ, ಅಂತರ್ಜಲ ಕುಸಿತ, ವಾಯು ಮಾಲಿನ್ಯದಂತಹ ವಿಕೋಪಗಳಿಗೆ ತುತ್ತಾಗಿ ಅಭಿವೃದ್ಧಿಯೇ ವಿನಾಶ ಎಂಬಂತಾಗಿದೆ. ಇವುಗಳಿಂದ ಪಾರಾಗಲು ಇರುವ ಒಂದೇ ಮಾರ್ಗವೆಂದರೆ ಅರಣ್ಯ ಬೆಳೆಸುವುದು. ಆದ್ದರಿಂದ ರಾಜ್ಯ ಕೇಂದ್ರ ಸರ್ಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿನ ಅರಣ್ಯೀಕರಣಕ್ಕೆ ಲಭ್ಯವಿರುವ ಅನುದಾನವನ್ನು ಸರ್ಕಾರಿ ಖಾಲಿ ಸ್ಥಳ, ಗೋಮಾಳ, ರಸ್ತೆ ಬದಿ, ಶಾಲಾ ಕಾಲೇಜಿನ ಆವರಣಗಳಲ್ಲಿ ನೆಟ್ಟು ಭೂಮಿಯ ತಾಪಮಾನವನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ.

**5. ಮುಂದುವರಿಕಾ ಶಿಕ್ಷಣ ಅಥವಾ ವಯಸ್ಕರ ಶಿಕ್ಷಣ  25000.00 :**

ಭಾರತದಲ್ಲಿದ್ದ ಬಹುಸಂಖ್ಯಾತ ಅನಕ್ಷರತೆಯನ್ನು ತೊಡೆದು ಹಾಕುವುದರ ಮೂಲಕ ಗ್ರಾಮ ಸ್ವರಾಜ್ಯ, ಮಹಿಳಾ ಸಬಲೀಕರಣ ಮತ್ತು ಶೋಷಿತ ವರ್ಗದ ಏಳಿಗೆಯನ್ನು ಸಾಧಿಸುವುದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಸ್ವಾತಂತ್ರ್ಯೋತ್ತರದ ಆಶಯ ಆಗಿತ್ತು. ಆದರೆ ಈ ಆಶಯ ಇನ್ನೂ ಸಂಪೂರ್ಣವಾಗಿ ಈಡೇರಿಲ್ಲ.

2001ರ ಜನಗಣತಿ ಪ್ರಕಾರ ರಾಜ್ಯದ ಸಾಕ್ಷರತಾ ಪ್ರಮಾಣ ಶೇ.66.64ರಷ್ಟಿದ್ದು, ರಾಷ್ಟ್ರದಲ್ಲಿ ಸಾಕ್ಷರತೆಯ ಸಾಲಿನಲ್ಲಿ ಕರ್ನಾಟಕ 21ನೇ ಸ್ಥಾನದಲ್ಲಿದೆ. ಮುಂದುರಿಕಾ ಶಿಕ್ಷಣದ ಮಹತ್ವವನ್ನು ತಿಳಿಯಲು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಅನುಷ್ಠಾನಗೊಂಡಿರುವ ಸಾಕ್ಷರ ಭಾರತ ಕಾರ್ಯಕ್ರಮವೇ ಉದಾಹರಣೆ.

ಕರ್ನಾಟಕ ಸರ್ಕಾರದ ಸಚಿವಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಸುತ್ತೋಲೆ ಸಂಖ್ಯೆ:ಗ್ರಾಅಪ.101:ಗ್ರಾಪಂಅ:2004, ದಿನಾಂಕ 24–02–2004ರನ್ವಯ ಗ್ರಾಮ ಪಂಚಾಯತ್‌ಗಳು ತಮ್ಮ ವಾರ್ಷಿಕ ಆಯ–ವ್ಯಯದಲ್ಲಿ ರೂ. 25000.00ಗಳಷ್ಟು ಮೊತ್ತವನ್ನು ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಮೀಸಲಿಡಲು ನಿರ್ದೇಶಿಸಲಾಗಿದೆ. (ಅನುಬಂಧ–2). ಈ ಮೊತ್ತವನ್ನು, ಅಗತ್ಯವಿರುವ ಕಡೆ ಕಲಿಕಾ ಕೇಂದ್ರಗಳಿಗೆ ಬೆಳಕಿನ ವ್ಯವಸ್ಥೆ, ಸಾಕ್ಷರತಾ ಘೋಷಣೆಗಳ ಗೋಡೆ ಬರಹ, ಸ್ವಯಂ ಸೇವಕರ ಮಾಸಿಕ ಸಭೆ ಮತ್ತು ಪ್ರೇರಣಾ ಚಟುವಟಿಕೆಗಳು, ನವಸಾಕ್ಷರರ ಕೌಶಲ್ಯ ಅಭಿವೃದ್ಧಿ ತರಬೇತಿ ಮುಂತಾದ ಕಾರ್ಯಗಳಿಗೆ ಬಳಸಬೇಕು.

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 31-05-2013ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| ಉತ್ತರ ಕನ್ನಡ | 208 | 100 | 6 | 55 | 75 | 80 | 0 | 52 | 1 |
| ದಕ್ಷಿಣ ಕನ್ನಡ | 203 | 100 | 0 | 61 | 60 | 89 | 0 | 51 | 2 |
| ಉಡುಪಿ | 146 | 100 | 0 | 39 | 84 | 86 | 0 | 51 | 3 |
| ಗದಗ | 106 | 100 | 0 | 0 | 100 | 94 | 0 | 49 | 4 |
| ಧಾರವಾಡ | 127 | 100 | 0 | 0 | 100 | 95 | 0 | 49 | 5 |
| ಮಂಡ್ಯ | 232 | 100 | 0 | 2 | 82 | 62 | 0 | 41 | 6 |
| ದಾವಣಗೆರೆ | 230 | 100 | 0 | 3 | 89 | 47 | 0 | 39 | 7 |
| ಕೊಡಗು | 98 | 100 | 0 | 9 | 31 | 86 | 0 | 37 | 8 |
| ಹಾವೇರಿ | 208 | 100 | 4 | 0 | 65 | 52 | 0 | 36 | 9 |
| ಬೆಂಗಳೂರು (ಗ್ರಾ) | 98 | 100 | 26 | 4 | 30 | 52 | 0 | 35 | 10 |
| ಚಿಕ್ಕಮಗಳೂರು | 226 | 100 | 22 | 18 | 20 | 55 | 0 | 35 | 11 |
| ಗುಲ್ಬರ್ಗಾ | 220 | 93 | 0 | 0 | 84 | 19 | 0 | 32 | 12 |
| ರಾಮನಗರ | 130 | 100 | 0 | 0 | 30 | 56 | 0 | 31 | 13 |
| ಬಾಗಲಕೋಟೆ | 163 | 100 | 0 | 3 | 46 | 38 | 0 | 31 | 14 |
| ಬಿಜಾಪುರ | 199 | 100 | 0 | 0 | 36 | 50 | 0 | 31 | 15 |
| ಹಾಸನ | 258 | 100 | 0 | 0 | 26 | 59 | 0 | 30 | 16 |
| ಚಾಮರಾಜನಗರ | 120 | 100 | 0 | 0 | 35 | 40 | 0 | 29 | 17 |
| ಚಿಕ್ಕಬಳ್ಳಾಪುರ | 151 | 100 | 0 | 1 | 11 | 62 | 0 | 29 | 18 |
| ಬಳ್ಳಾರಿ | 189 | 100 | 0 | 0 | 33 | 40 | 0 | 28 | 19 |
| ಕೊಪ್ಪಳ | 134 | 100 | 0 | 4 | 13 | 50 | 0 | 27 | 20 |
| ಮೈಸೂರು | 235 | 100 | 21 | 1 | 8 | 34 | 0 | 27 | 21 |
| ಬೆಂಗಳೂರು (ನ) | 86 | 100 | 0 | 11 | 16 | 31 | 0 | 26 | 22 |
| ತುಮಕೂರು | 321 | 100 | 0 | 0 | 14 | 38 | 0 | 25 | 23 |
| ಶಿವಮೊಗ್ಗ | 260 | 100 | 0 | 5 | 2 | 46 | 0 | 25 | 24 |
| ಕೋಲಾರ | 156 | 100 | 0 | 0 | 11 | 40 | 0 | 25 | 25 |
| ಚಿತ್ರದುರ್ಗ | 185 | 97 | 0 | 0 | 12 | 37 | 0 | 24 | 26 |
| ಬೆಳಗಾವಿ | 485 | 100 | 1 | 0 | 3 | 38 | 0 | 23 | 27 |
| ಬೀದರ | 175 | 100 | 0 | 0 | 18 | 22 | 0 | 23 | 28 |
| ರಾಯಚೂರು | 164 | 100 | 0 | 0 | 0 | 15 | 0 | 19 | 29 |
| ಯಾದಗಿರಿ | 117 | 97 | 0 | 0 | 5 | 17 | 0 | 19 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಮೇ 2013)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಅ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ದಾವಣಗೆರೆ | 5772 | 5944 | 0 | 1 | 303 | 1 | 1 |
| ಮಂಡ್ಯ | 3660 | 2965 | 0.1 | 5 | 203 | 2 | 2 |
| ಚಾಮರಾಜನಗರ | 1834 | 1421 | 0.1 | 5 | 183 | 4 | 3 |
| ಬಾಗಲಕೋಟೆ | 2123 | 2442 | 0.1 | 5 | 117 | 5 | 4 |
| ಕೊಡಗು | 375 | 408 | 0 | 1 | 75 | 10 | 5 |
| ಉಡುಪಿ | 1254 | 1160 | 0.9 | 12 | 114 | 6 | 6 |
| ದಕ್ಷಿಣ ಕನ್ನಡ | 1672 | 1448 | 0.3 | 10 | 83 | 8 | 7 |
| ಹಾಸನ | 1542 | 1612 | 1.2 | 13 | 90 | 7 | 8 |
| ಗುಲ್ಬರ್ಗಾ | 4753 | 4927 | 6.1 | 23 | 190 | 3 | 9 |
| ಉತ್ತರ ಕನ್ನಡ | 806 | 866 | 0 | 1 | 57 | 13 | 10 |
| ರಾಮನಗರ | 677 | 624 | 2.1 | 16 | 67 | 11 | 11 |
| ಚಿಕ್ಕಮಗಳೂರು | 747 | 666 | 2.1 | 16 | 67 | 11 | 11 |
| ಗದಗ | 437 | 522 | 0.2 | 8 | 43 | 15 | 13 |
| ಚಿಕ್ಕಬಳ್ಳಾಪುರ | 518 | 402 | 0.2 | 8 | 43 | 15 | 13 |
| ಬಿಜಾಪುರ | 1659 | 1785 | 8.5 | 27 | 79 | 9 | 15 |
| ಧಾರವಾಡ | 373 | 380 | 0 | 1 | 20 | 22 | 16 |
| ಬಳ್ಳಾರಿ | 1099 | 1116 | 2.3 | 18 | 43 | 15 | 17 |
| ಹಾವೇರಿ | 746 | 759 | 2.8 | 21 | 49 | 14 | 18 |
| ಕೊಪ್ಪಳ | 379 | 421 | 1.2 | 13 | 29 | 18 | 19 |
| ಚಿತ್ರದುರ್ಗ | 396 | 363 | 0.8 | 11 | 24 | 20 | 20 |
| ಬೆಳಗಾಂ | 1023 | 1026 | 2.3 | 18 | 21 | 21 | 21 |
| ಬೆಂಗಳೂರು ಗ್ರಾಮಾಂತರ | 231 | 239 | 7.1 | 25 | 25 | 19 | 22 |
| ಕೋಲಾರ | 247 | 240 | 1.3 | 15 | 16 | 25 | 23 |
| ಶಿವಮೊಗ್ಗ | 311 | 231 | 2.6 | 20 | 18 | 24 | 24 |
| ತುಮಕೂರು | 519 | 475 | 18.7 | 28 | 19 | 23 | 25 |
| ಬೀದರ್ | 280 | 288 | 6.6 | 24 | 16 | 25 | 26 |
| ಬೆಂಗಳೂರು | 255 | 238 | 2.9 | 22 | 2 | 28 | 27 |
| ಮೈಸೂರು | 226 | 222 | 7.7 | 26 | 7 | 27 | 28 |
| ಯಾದಗಿರಿ | 18 | 20 | 30 | 29 | 1 | 29 | 29 |
| ರಾಯಚೂರು | 10 | 36 | 30.6 | 30 | 0 | 30 | 30 |

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಜಿಲ್ಲಾ ಪಂಚಾಯತಿಗಳಿಗ ವಾರ್ಷಿಕ ರೂ.200.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ.ಗ್ರಾಅಪ 127 ಜಿಪಸ 2011, ದಿನಾಂಕ 15.07.2011.

2. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 23.09.2011.

3. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 29.10.2011.

2. ಆರ್ಥಿಕ ಇಲಾಖೆ ಸಹಮತಿ ಸಂಖ್ಯೆ: FD/PS(B&R)/547/2013, ದಿ:16.02.2013.

**ಪ್ರಸ್ತಾವನೆ:**

2011–12 ಹಾಗೂ 2012–13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲು ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ರೀತಿ ಬಿಡುಗಡೆ ಮಾಡಿದ ಅನುದಾನವನ್ನು ವಿನಿಯೋಗಿಸುವ ಸಂಬಂಧ ಮೇಲೆ ಓದಲಾದ (1) ರಿಂದ (3) ರಲ್ಲಿರುವ ಸರ್ಕಾರಿ ಆದೇಶಗಳಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿ, ಅದರಂತೆ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಲಾಗಿತ್ತು.

2013–14ನೇ ಸಾಲಿನಲ್ಲಿ ಪ್ರತಿ ಜಿಲ್ಲಾ ಪಂಚಾಯತಿಗೆ ವಾರ್ಷಿಕ ರೂ.200.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿ ಕೊಂಡು ಯೋಜನೆಯನ್ನು ತಯಾರಿಸಿ ಯಶಸ್ವಿಯಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿವರವಾದ ಮಾರ್ಗಸೂಚಿಗಳ ಅವಶ್ಯಕತೆ ಇರುವುದರಿಂದ ಮೇಲೆ ಓದಲಾದ (1) ರಿಂದ (3) ರಲ್ಲಿನ ಸರ್ಕಾರಿ ಆದೇಶಗಳನ್ನು ಹಿಂದಕ್ಕೆ ಪಡೆಯುವ ಅವಶ್ಯಕತೆ ಇದ್ದು, ಹೊಸ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡಂತೆ ಆದೇಶ.

## ಸರ್ಕಾರಿ ಆದೇಶ ಸಂ.ಗ್ರಾಅಪ 75 ಜಿಪಸ 2013, ಬೆಂಗಳೂರು, ದಿನಾಂಕ 06.05.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2011–12 ಹಾಗೂ 2012–13ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲು ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಈ ಮೊದಲು ಹೊರಡಿಸಲಾಗಿದ್ದ, **ಮೇಲೆ ಓದಲಾದ (1 ರಿಂದ 3ರ) ಸರ್ಕಾರದ ಆದೇಶಗಳನ್ನು ಈ ಮೂಲಕ ಹಿಂಪಡೆಯಲಾಗಿದೆ** ಹಾಗು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ 2013–14 ಹಾಗೂ ನಂತರದ ವರ್ಷಗಳಲ್ಲಿ ಬಿಡುಗಡೆಯಾಗುವ ಅಭಿವೃದ್ಧಿ ಅನುದಾನ ರೂ.200.00 ಲಕ್ಷಗಳನ್ನು ಬಳಸಿಕೊಳ್ಳಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ.

1. ವಾರ್ಷಿಕ ಹಂಚಿಕೆಯಾಗುವ ಅನುದಾನ ರೂ.200.00 ಲಕ್ಷಗಳಿಗೆ ಜಿಲ್ಲಾ ಪಂಚಾಯತಿಯು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಹಾಗೂ ಅದರ ಅನುಮೋದನೆಯನ್ನು ನೀಡುವುದು.

2. ಈ ಅಭಿವೃದ್ಧಿ ಯೋಜನೆಯು, ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.

3. ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಶೇ.90 ರಷ್ಟು

ದೀರ್ಘಕಾಲಿಕ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು (ಕಟ್ಟಡಗಳು) ನಿರ್ಮಿಸಲು ಕಾಯ್ದಿರಿಸುವುದು, ಶೇ.10 ರಷ್ಟು ಇತರೆ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವುದು (ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪ್ರತಿಬಂಧಿಸಲಾಗಿದೆ).

4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶಗಳನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.

5. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವುದು.

6. ಈ ಕ್ರಿಯಾ ಯೋಜನೆಯು ಜಿಲ್ಲಾ ಕ್ರಿಯಾ ಯೋಜನೆಯ ಭಾಗವಾಗಿರಬೇಕು ಹಾಗು ಪ್ಲಾನ್-ಪ್ಲಸ್ ತಂತ್ರಾಂಶದಲ್ಲಿ ಕ್ರಿಯಾ ಯೋಜನೆಯನ್ನು ಅಪ್‌ಲೋಡ್ ಮಾಡುವುದು.

7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.

8. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.

9. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.

10. ಜನರ ಆಶೋತ್ತರಗಳಿಗೆ ಪೂರಕವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಶಿಫಾರಸ್ಸುಗಳನ್ವಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದಲ್ಲಿ ಅಂತಹ ಯೋಜನೆಗಳು ತನಗೆ ತಾನೆ ರದ್ದಾಗುತ್ತದೆ.

11. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.

12. ಜಿಲ್ಲಾ ಪಂಚಾಯತಿಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 184 ಹಾಗು ಅದರಡಿಯಲ್ಲಿ ರಚಿತವಾಗಿರುವ ಅನುಸೂಚಿ-3 ರಲ್ಲಿ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ಹಾಗೂ ಸರ್ಕಾರಿ ಅಧಿಸೂಚನೆ ಸಂ.ಗ್ರಾಅಪ 367 ಜಿಪಸ 2002, ದಿನಾಂಕ 18.08.2003 ರಲ್ಲಿ ಹೊರಡಿಸಿರುವ ಚಟುವಟಿಕೆಗಳನ್ನು ಮಾತ್ರ ಪರಿಗಣಿಸುವುದು.

13. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

14. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.

15. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.

16. ಅನುಮೋದಿತ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದರ ಜೊತೆಗೆ ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿಯೂ ಸಹ ಪ್ರತಿ ಕಾಮಗಾರಿಯ ವಿವರಗಳನ್ನು ಹಂತವಾರು ದಾಖಲಿಸಬೇಕು.

17. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.

18. ಈ ಅನುದಾನದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 256, 258 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).

19. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು.

20. ಈ ಯೋಜನೆಯ ಪ್ರಗತಿಯನ್ನು ಕಡ್ಡಾಯವಾಗಿ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಂಡಿಸತಕ್ಕದ್ದು ಹಾಗು ಜಿಲ್ಲಾ ಪಂಚಾಯತಿ ಸಭೆಯು ಯೋಜನೆಯ ಪ್ರಗತಿಯನ್ನು ಪರಾಮರ್ಶೆ ಮಾಡುವುದು.

21. ಈ ಯೋಜನೆಯಲ್ಲಿ ಕೈಗೊಳ್ಳಲಾದ ಪ್ರತಿಯೊಂದು ಕಾಮಗಾರಿಗಳು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ.

### ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;

2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;

3. ಪಂಚಾಯತ್ ಸಂಸ್ಥೆಗಳಿಗೆ ಭೂಮಿಯನ್ನು ಸ್ವಾಧೀನಗೊಳಿಸುವುದನ್ನು ಅಥವಾ ಸ್ವಾಧೀನಗೊಳಿಸಲಿರುವ ಭೂಮಿಗೆ ಪರಿಹಾರ ನೀಡುವುದನ್ನು;

4. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;

5. ಕಛೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;

6. ಕಛೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;

7. ಸಾದಿಲ್ವಾರು ವೆಚ್ಚ ಮಾಡುವುದನ್ನು;

8. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಛೇರಿ ಕಾರ್ಯಕ್ಕಾಗಿ ಪಡೆಯುವುದನ್ನು;

9. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು

10. ಯಾವುದೇ ರೀತಿಯ ನೀರು ರಸ್ತೆ ಅಥವಾ ಇನ್ಯಾವುದೇ ನಿರ್ವಹಣೆ ಹಾಗು ದುರಸ್ತಿ ಕೈಗೊಳ್ಳುವುದನ್ನು.

11. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ. 15 ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)

12. ಯಾವುದೇ ಕಾರಣಕ್ಕೂ ಈ ಅನುದಾನದಲ್ಲಿ ನೀರಿನ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (Operation and maintenance) ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ. ಕಾರಣ ಪ್ರತ್ಯೇಕವಾಗಿ ನೀರು ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡಲಾಗುವುದು.

13. ಈ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತಿ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.

14. ಈ ಅನುದಾನದಡಿಯಲ್ಲಿ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tours) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.

15. ಯಾವುದೇ ಕಛೇರಿ ಕಟ್ಟಡಗಳ ನಿರ್ಮಾಣ ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ. ಉದಾ: ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಛೇರಿ ಕಟ್ಟಡಗಳು.

16. ಜಿಲ್ಲಾ ಪಂಚಾಯತಿ ಸದಸ್ಯವಾರು ಅನುದಾನ ಹಂಚಿಕೆ ಮಾಡುವುದನ್ನು ನಿಷೇಧಿಸಲಾಗಿದೆ.

17. ಯಾವುದೇ ತಂತ್ರಾಂಶ ತಯಾರಿಸಲು ಅನುದಾನವನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.

**ಕಾರ್ಯಕ್ರಮ ಅನುಷ್ಠಾನದ ಕಾರ್ಯಸೂಚಿ:**

1. ವಾರ್ಡ್ ಸಭೆ ಹಾಗು ಗ್ರಾಮ ಸಭೆ – ಏಪ್ರಿಲ್/ಮೇ ಮಾಹೆ
2. ಅಭಿವೃದ್ಧಿ ಯೋಜನೆಯ ತಯಾರಿಕೆ ಹಾಗು ಅನುಮೋದನೆ – ಏಪ್ರಿಲ್/ಮೇ ಮಾಹೆ
3. ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಅನುಮೋದನೆ (ಸಕ್ಷಮ ಪ್ರಾಧಿಕಾರದಿಂದ) – ಮೇ, 15 ರಿಂದ ಜೂನ್ 30.
4. ಯೋಜನೆಯ ಅನುಷ್ಠಾನ – ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆ
5. ಸಾಮಾಜಿಕ ಲೆಕ್ಕಪರಿಶೋಧನೆ (ಜಮಾಬಂಧಿ) – ಆಗಸ್ಟ್ 16 ರಿಂದ ಸೆಪ್ಟೆಂಬರ್ 15
6. ಪ್ರಗತಿ ವರದಿ ಅಪ್ ಲೋಡ್ – ಪ್ರತಿ ಮಾಹೆ 1ರಿಂದ 5ನೇ ದಿನಾಂಕದೊಳಗೆ
7. ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರ – ಪ್ರತಿ ವರ್ಷದ ಏಪ್ರಿಲ್ ಮಾಹೆ
8. Non-embezzlement and Non-duplication ಧೃಢೀಕರಣ ಪತ್ರಗಳನ್ನು ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
9. ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ಯಶೋಗಾಥೆಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಪಿ.ಕುಮಾರ್)
ನಿರ್ದೇಶಕರು (ಪಂ.ರಾಜ್) ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2013-14ನೇ ಸಾಲಿನ ಆಯವ್ಯಯದಲ್ಲಿ ಘೋಸಿರುವಂತೆ ತಾಲ್ಲೂಕು ಪಂಚಾಯತಿಗಳಿಗೆ ವಾರ್ಷಿಕ ರೂ.100.00 ಲಕ್ಷಗಳ ಸಂಯುಕ್ತ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ : 1. ಸರ್ಕಾರಿ ಆದೇಶ ಸಂ.ಗ್ರಾಅಪ 127 ಜಿಪಸ 2011, ದಿನಾಂಕ 15.07.2011.

2. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 23.09.2011.

3. ಸರ್ಕಾರಿ ಆದೇಶ ಸಂ.ಗ್ರಾಅಪ 123 ಜಿಪಸ 2011, ದಿನಾಂಕ 29.10.2011.

**ಪ್ರಸ್ತಾವನೆ:**

2011-12 ಹಾಗೂ 2012-13ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲು ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ರೀತಿ ಬಿಡುಗಡೆ ಮಾಡಿದ ಅನುದಾನವನ್ನು ವಿನಿಯೋಗಿಸುವ ಸಂಬಂಧ ಮೇಲೆ ಓದಲಾದ (1) ರಿಂದ (3) ರಲ್ಲಿರುವ ಸರ್ಕಾರಿ ಆದೇಶಗಳಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿ, ಅದರಂತೆ ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಲಾಗಿತ್ತು.

2013-14ನೇ ಸಾಲಿನಲ್ಲಿ ಪ್ರತಿ ತಾಲ್ಲೂಕು ಪಂಚಾಯತಿಗೆ ವಾರ್ಷಿಕ ರೂ.100.00 ಲಕ್ಷಗಳ ಅಭಿವೃದ್ಧಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿ ಕೊಂಡು ಯೋಜನೆಯನ್ನು ತಯಾರಿಸಿ ಯಶಸ್ವಿಯಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ವಿವರವಾದ ಮಾರ್ಗಸೂಚಿಗಳ ಅವಶ್ಯಕತೆ ಇರುವುದರಿಂದ ಮೇಲೆ ಓದಲಾದ (1) ರಿಂದ (3) ರಲ್ಲಿನ ಸರ್ಕಾರಿ ಆದೇಶಗಳನ್ನು ಹಿಂದಕ್ಕೆ ಪಡೆಯುವ ಅವಶ್ಯಕತೆ ಇದ್ದು, ಹೊಸ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡಂತೆ ಆದೇಶ.

## ಸರ್ಕಾರಿ ಆದೇಶ ಸಂ.ಗ್ರಾಅಪ 76 ಜಿಪಸ 2013, ಬೆಂಗಳೂರು, ದಿನಾಂಕ 06.05.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2011-12 ಹಾಗೂ 2012-13ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸಲು ಅನಿರ್ಬಂಧಿತ ಅಭಿವೃದ್ಧಿ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಈ ಮೊದಲು ಹೊರಡಿಸಲಾಗಿದ್ದ, **ಮೇಲೆ ಓದಲಾದ (1 ರಿಂದ 3ರ) ಸರ್ಕಾರದ ಆದೇಶಗಳನ್ನು ಈ ಮೂಲಕ ಹಿಂಪಡೆಯಲಾಗಿದೆ** ಹಾಗು ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ 2013-14 ಹಾಗೂ ನಂತರದ ವರ್ಷಗಳಲ್ಲಿ ಬಿಡುಗಡೆಯಾಗುವ ಅಭಿವೃದ್ಧಿ ಅನುದಾನ ರೂ.100.00 ಲಕ್ಷಗಳನ್ನು ಬಳಸಿಕೊಳ್ಳಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ.

1. ವಾರ್ಷಿಕ ಹಂಚಿಕೆಯಾಗುವ ಅನುದಾನ ರೂ.100.00 ಲಕ್ಷಗಳಿಗೆ ತಾಲ್ಲೂಕು ಪಂಚಾಯತಿಯು ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಹಾಗೂ ಅದರ ಅನುಮೋದನೆಯನ್ನು ನೀಡುವುದು.
2. ಈ ಅಭಿವೃದ್ಧಿ ಯೋಜನೆಯು, ತಾಲ್ಲೂಕು ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. ತಾಲ್ಲೂಕು ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಶೇ.90 ರಷ್ಟು ದೀರ್ಘಕಾಲಿಕ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು (ಕಟ್ಟಡಗಳು) ನಿರ್ಮಿಸಲು

ಕಾಯ್ದಿರಿಸುವುದು, ಶೇ.10 ರಷ್ಟು ಇತರೆ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವುದು (ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪ್ರತಿಬಂಧಿಸಲಾಗಿದೆ).

4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶಗಳನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
5. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವುದು.
6. ಈ ಕ್ರಿಯಾ ಯೋಜನೆಯು ತಾಲ್ಲೂಕು ಹಾಗು ಜಿಲ್ಲಾ ಕ್ರಿಯಾ ಯೋಜನೆಯ ಭಾಗವಾಗಿರಬೇಕು ಹಾಗು ಪ್ಲಾನ್-ಪ್ಲಸ್ ತಂತ್ರಾಂಶದಲ್ಲಿ ಕ್ರಿಯಾ ಯೋಜನೆಯನ್ನು ಅಪ್‌ಲೋಡ್ ಮಾಡುವುದು.
7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
8. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
9. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
10. ಜನರ ಆಶೋತ್ತರಗಳಿಗೆ ಪೂರಕವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಶಿಫಾರಸ್ಸುಗಳನ್ವಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದಲ್ಲಿ ಅಂತಹ ಯೋಜನೆಗಳು ತನಗೆ ತಾನೆ ರದ್ದಾಗುತ್ತದೆ.
11. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.
12. ತಾಲ್ಲೂಕು ಪಂಚಾಯತಿಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 145 ಹಾಗು ಅದರಡಿಯಲ್ಲಿ ರಚಿತವಾಗಿರುವ ಅನುಸೂಚಿ-2 ರಲ್ಲಿ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ಹಾಗೂ ಸರ್ಕಾರಿ ಅಧಿಸೂಚನೆ ಸಂ.ಗ್ರಾಅಪ 367 ಜಿಪಸ 2002, ದಿನಾಂಕ 18.08.2003 ರಲ್ಲಿ ಹೊರಡಿಸಿರುವ ಚಟುವಟಿಕೆಗಳನ್ನು ಮಾತ್ರ ಪರಿಗಣಿಸುವುದು.
13. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
14. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ತಾಲ್ಲೂಕು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.
15. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
16. ಅನುಮೋದಿತ ಯೋಜನೆಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದರ ಜೊತೆಗೆ

ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿಯೂ ಸಹ ಪ್ರತಿ ಕಾಮಗಾರಿಯ ವಿವರಗಳನ್ನು ಹಂತವಾರು ದಾಖಲಿಸಬೇಕು.

17. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.
18. ಈ ಅನುದಾನದ ಕ್ರಿಯಾ ಯೋಜನೆಯು ತಾಲ್ಲೂಕು ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 247, 250 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).
19. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು.
20. ಈ ಯೋಜನೆಯ ಪ್ರಗತಿಯನ್ನು ಕಡ್ಡಾಯವಾಗಿ ತಾಲ್ಲೂಕು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಮಂಡಿಸತಕ್ಕದ್ದು ಹಾಗು ತಾಲ್ಲೂಕು ಪಂಚಾಯತಿ ಸಭೆಯು ಯೋಜನೆಯ ಪ್ರಗತಿಯನ್ನು ಪರಾಮರ್ಶೆ ಮಾಡುವುದು.
21. ಈ ಯೋಜನೆಯಲ್ಲಿ ಕೈಗೊಳ್ಳಲಾದ ಪ್ರತಿಯೊಂದು ಕಾಮಗಾರಿಗಳು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತದೆ.

**ತಾಲ್ಲೂಕು ಪಂಚಾಯತಿ ಅಭಿವೃದ್ಧಿ ಅನುದಾನದಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:**

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ಪಂಚಾಯತ್ ಸಂಸ್ಥೆಗಳಿಗೆ ಭೂಮಿಯನ್ನು ಸ್ವಾಧೀನಗೊಳಿಸುವುದನ್ನು ಅಥವಾ ಸ್ವಾಧೀನಗೊಳಿಸಲಿರುವ ಭೂಮಿಗೆ ಪರಿಹಾರ ನೀಡುವುದನ್ನು;
4. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;
5. ಕಛೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;
6. ಕಛೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
7. ಸಾದಿಲ್ವಾರು ವೆಚ್ಚ ಮಾಡುವುದನ್ನು;
8. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
9. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು
10. ಯಾವುದೇ ರೀತಿಯ ನೀರು ರಸ್ತೆ ಅಥವಾ ಇನ್ಯಾವುದೇ ನಿರ್ವಹಣೆ ಹಾಗು ದುರಸ್ತಿ ಕೈಗೊಳ್ಳುವುದನ್ನು.
11. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ. 15 ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)
12. ಯಾವುದೇ ಕಾರಣಕ್ಕೂ ಈ ಅನುದಾನದಲ್ಲಿ ನೀರಿನ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ

(Operation and maintenance) ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ. ಕಾರಣ ಪ್ರತ್ಯೇಕವಾಗಿ ನೀರು ನಿರ್ವಹಣೆಗೆ ಅನುದಾನ ಬಿಡುಗಡೆ ಮಾಡಲಾಗುವುದು.

13. ಈ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.
14. ಈ ಅನುದಾನದಡಿಯಲ್ಲಿ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tour) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.
15. ಯಾವುದೇ ಕಛೇರಿ ಕಟ್ಟಡಗಳ ನಿರ್ಮಾಣ ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ. ಉದಾ: ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಛೇರಿ ಕಟ್ಟಡಗಳು.
16. ತಾಲ್ಲೂಕು ಪಂಚಾಯತಿ ಸದಸ್ಯವಾರು ಅನುದಾನ ಹಂಚಿಕೆ ಮಾಡುವುದನ್ನು ನಿಷೇಧಿಸಲಾಗಿದೆ.
17. ಯಾವುದೇ ತಂತ್ರಾಂಶ ತಯಾರಿಸಲು ಅನುದಾನವನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ.

**ಕಾರ್ಯಕ್ರಮ ಅನುಷ್ಠಾನದ ಕಾರ್ಯಸೂಚಿ:**

1. ವಾರ್ಡ್ ಸಭೆ ಹಾಗು ಗ್ರಾಮ ಸಭೆ – ಏಪ್ರಿಲ್/ಮೇ ಮಾಹೆ
2. ಅಭಿವೃದ್ಧಿ ಯೋಜನೆಯ ತಯಾರಿಕೆ ಹಾಗು ಅನುಮೋದನೆ – ಏಪ್ರಿಲ್/ಮೇ ಮಾಹೆ
3. ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಅನುಮೋದನೆ (ಸಕ್ಷಮ ಪ್ರಾಧಿಕಾರದಿಂದ) – ಮೇ, 15 ರಿಂದ ಜೂನ್ 30.
4. ಯೋಜನೆಯ ಅನುಷ್ಠಾನ – ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆ
5. ಸಾಮಾಜಿಕ ಲೆಕ್ಕಪರಿಶೋಧನೆ (ಜಮಾಬಂಧಿ) – ಆಗಸ್ಟ್ 16 ರಿಂದ ಸೆಪ್ಟೆಂಬರ್ 15
6. ಪ್ರಗತಿ ವರದಿ ಅಪ್ ಲೋಡ್ – ಪ್ರತಿ ಮಾಹೆ 1ರಿಂದ 5ನೇ ದಿನಾಂಕದೊಳಗೆ
7. ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರ – ಪ್ರತಿ ವರ್ಷದ ಏಪ್ರಿಲ್ ಮಾಹೆ
8. Non-embezzlement and Non-duplication ಧೃಢೀಕರಣ ಪತ್ರಗಳನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರೋಢಿಕರಿಸಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಪ್ರತಿ ವರ್ಷ ಏಪ್ರಿಲ್ ಮಾಹೆಯಲ್ಲಿ ತಾಲ್ಲೂಕು ಪಂಚಾಯತಿಗಳ ಯಶೋಗಾಥೆಗಳನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರೋಢಿಕರಿಸಿ ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಪಿ.ಕುಮಾರ್)
ನಿರ್ದೇಶಕರು (ಪಂ.ರಾಜ್) ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 13ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 65 ಗ್ರಾಪಸ 2005, ದಿನಾಂಕ: 09.11.2005.

2. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 61 ಗ್ರಾಪಸ 2010 ದಿನಾಂಕ 18.8.2010

3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 09 ಗ್ರಾಪಸ 2011, ದಿನಾಂಕ 27.04.2011.

4. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 124 ಜಿಪಸ 2011 ದಿನಾಂಕ 19.12.2011.

5. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 115 ಗ್ರಾಪಸ 2011, ದಿನಾಂಕ 28.12.2011.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 12ನೇ ಹಣಕಾಸು ಆಯೋಗದ ಅನುದಾನದ ಬಳಕೆಯ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ 13ನೇ ಹಣಕಾಸು ಆಯೋಗದಡಿ ಬಿಡುಗಡೆಯಾಗುವ ಅನುದಾನವನ್ನು ಬಳಸಿಕೊಳ್ಳಲು ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ನೀಡಿಲ್ಲದ ಕಾರಣ 13ನೇ ಹಣಕಾಸು ಆಯೋಗದಡಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಅನುದಾನಕ್ಕೆ ಸಂಬಂಧಿಸಿದಂತೆ 12ನೇ ಹಣಕಾಸು ಆಯೋಗದ ಮಾರ್ಗಸೂಚಿಯಂತೆ 2012–13ನೇ ಸಾಲಿನವರೆಗೆ ಕ್ರಿಯಾ ಯೋಜನೆಯನ್ನು ತಯಾರಿಸುವಂತೆ ತಿಳಿಸಲಾಗಿದೆ.

ಆದರೆ 12ನೇ ಹಣಕಾಸು ಆಯೋಗದ ಅವಧಿ 2005–2010 ಇದ್ದು, ಆ ಸಂದರ್ಭದಲ್ಲಿ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಮತ್ತು ಇತರೆ ಯೋಜನೆಗಳ ಸಂಪೂರ್ಣ ರೀತಿಯಲ್ಲಿ ಅನುಷ್ಠಾನದಲ್ಲಿ ಇಲ್ಲದೇ ಇರುವುದರಿಂದ, 12ನೇ ಹಣಕಾಸು ಆಯೋಗದ ಮಾರ್ಗಸೂಚಿಯಲ್ಲಿ ಈ ವಿಷಯಗಳ ಬಗ್ಗೆ ಯೋಜನೆ ರೂಪಿಸಲು ಅವಕಾಶ ಕಲ್ಪಿಸಲಾಗಿತ್ತು.

ಆದರೆ 13ನೇ ಹಣಕಾಸು ಆಯೋಗದ ಅವಧಿಯಲ್ಲಿ ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಮತ್ತು ಇತರೆ ಹಲವಾರು ಸರ್ಕಾರದ ಯೋಜನೆಗಳು ಇದ್ದು ಇದರಡಿಯಲ್ಲಿ ಪ್ರತ್ಯೇಕ ಅನುದಾನ ಲಭ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ 13ನೇ ಹಣಕಾಸು ಆಯೋಗದ ಅನುದಾನ ಪರಿಣಾಮಕಾರಿಯಾಗಿ ಬಳಸಲು ಮತ್ತು ಸಾಮಾಜಿಕ ಆರ್ಥಿಕ ಸೂಚಕಗಳು ಆಧಾರಿತ ಮೂಲಭೂತ ಸೌಕರ್ಯ ಒದಗಿಸಲು ಅವಕಾಶ ಮಾಡಿಕೊಡಲು 13ನೇ ಹಣಕಾಸು ಆಯೋಗದ ಅನುದಾನ ಬಳಕೆ ಮಾಡಲು ಮಾರ್ಗಸೂಚಿಗಳನ್ನು ನೀಡಲಾಗುತ್ತಿದೆ.

ಈ ಮಾರ್ಗಸೂಚಿಗಳ ಅನ್ವಯವೇ ಆದೇಶ ಸಂಖ್ಯೆ ಗ್ರಾಅಪ 60 ಗ್ರಾಪಸ 2012, ದಿನಾಂಕ 15.3.2013 ಮತ್ತು ಆದೇಶ ಸಂಖ್ಯೆ: ಗ್ರಾಅಪ 60 ಗ್ರಾಪಸ 2012, ದಿನಾಂಕ 21.3.2013 ರಂದು ಬಿಡುಗಡೆ ಆಗಿರುವ ಸಾಮಾನ್ಯ ಮೂಲ ಅನುದಾನವನ್ನು (General Basic Grant) ಬಳಕೆ ಮಾಡಬೇಕು ಮತ್ತು ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಹಾಗೂ ಇನ್ನು ಮುಂದೆ 13ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ಬಿಡುಗಡೆ ಆಗುವ ಯಾವುದೇ ಅನುದಾನವನ್ನು ಈ ಕೆಳಕಂಡ ಮಾರ್ಗಸೂಚಿಗಳನ್ವಯವೇ ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಲಾಗುವ ಕಾಮಗಾರಿಗಳ ಕ್ರಿಯಾ ಯೋಜನೆಗಳನ್ನು ಕ್ರೋಢೀಕರಿಸಿ ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿದ ನಂತರವೇ ಜಾರಿಗೆ ತರಬೇಕಾಗಿರುತ್ತದೆ.

13ನೇ ಹಣಕಾಸು ಆಯೋಗದ ಅನುದಾನದ ಬಿಡುಗಡೆ ಮಾಡಲು ಕೇಂದ್ರ ಹಣಕಾಸು ಆಯೋಗ ಹಾಗೂ ರಾಜ್ಯ ಆರ್ಥಿಕ ಇಲಾಖೆ ಸೂಚಿಸಿದ್ದರ ಅನ್ವಯ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಗ್ರಾಮ ಪಂಚಾಯತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಅನುಷ್ಠಾನ ಹಾಗೂ ಉತ್ತರದಾಯಿತ್ವವನ್ನು ತರುವ ಉದ್ದೇಶದಿಂದ 2011-12ನೇ ಸಾಲಿನಲ್ಲಿ ಸಾಮಾನ್ಯ ಮೂಲ ಅನುದಾನ (General Basic Grants) ಮತ್ತು ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಬಿಡುಗಡೆ ಮಾಡಲು ಮಾನದಂಡಗಳನ್ನು ಮೇಲೆ ಓದಲಾದ (4) ರ ಸರ್ಕಾರದ ಸುತ್ತೋಲೆಯಲ್ಲಿ ನಿಗದಿಪಡಿಸಲಾಗಿದೆ.

13ನೇ ಹಣಕಾಸು ಆಯೋಗದ ಅನುದಾನವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ 10:20:70 ರ ಅನುಪಾತದಲ್ಲಿ ಸರ್ಕಾರವು ಆಗಿಂದಾಗ್ಗೆ ಬಿಡುಗಡೆ ಮಾಡುತ್ತಿರುತ್ತದೆ. 13ನೇ ಹಣಕಾಸು ಆಯೋಗದ ಯೋಜನೆ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳ ಅವಶ್ಯಕತೆ ಇರುತ್ತದೆ. ಆದುದರಿಂದ, ಈ ಕೆಳಕಂಡ ಆದೇಶ.

## ಸರ್ಕಾರಿ ಆದೇಶ ಸಂ.ಗ್ರಾಅಪ 21 ಗ್ರಾಪಸ 2013, ಬೆಂಗಳೂರು, ದಿನಾಂಕ 16.04.2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 13ನೇ ಹಣಕಾಸು ಆಯೋಗದ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಈ ಮೊದಲು ಹೊರಡಿಸಲಾಗಿದ್ದ, ಮೇಲೆ ಓದಲಾದ (1 ರಿಂದ 4ರ) ಸರ್ಕಾರದ ಆದೇಶ/ಪತ್ರಗಳನ್ನು ಈ ಮೂಲಕ ಹಿಂಪಡೆಯಲಾಗಿದೆ ಹಾಗು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುವ 13ನೇ ಹಣಕಾಸು ಆಯೋಗದ ಅನುದಾನವನ್ನು ಬಳಸಿಕೊಳ್ಳಲು ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿದೆ.

### ಗ್ರಾಮ ಪಂಚಾಯತಿ:

1. ಪ್ರಸಕ್ತ ಸಾಲಿನ ವಾರ್ಷಿಕ ಹಂಚಿಕೆಗೆ ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಸಂಪೂರ್ಣ ಅನುದಾನವನ್ನು ಪರಿಗಣಿಸುವುದು. (ಉದಾ: 2012-13ನೇ ಸಾಲಿನಲ್ಲಿ ರೂ.10.00 ಲಕ್ಷ ಬಿಡುಗಡೆಯಾಗಿದ್ದಲ್ಲಿ 2013-14ನೇ ಸಾಲಿಗೆ ರೂ.10.00 ಲಕ್ಷವನ್ನು ತಾತ್ಕಾಲಿಕ ವಾರ್ಷಿಕ ಹಂಚಿಕೆಯೆಂದು ಪರಿಗಣಿಸುವುದು).
2. 13ನೇ ಹಣಕಾಸು ಆಯೋಗದಡಿಯಲ್ಲಿ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನಕ್ಕೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು. ಈ ಅಭಿವೃದ್ಧಿ ಯೋಜನೆಯು ಗ್ರಾಮ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಡುಗಡೆಯಾಗುವ/ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಕನಿಷ್ಠ ಶೇ.90 ರಷ್ಟು ದೀರ್ಘ ಕಾಲ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು (ಕಟ್ಟಡಗಳು) ನಿರ್ಮಿಸಲು ಕಾಯ್ದಿರಿಸುವುದು, ಶೇ.10 ರಷ್ಟು ಮೀರದ ಇತರೆ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವುದು (ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪ್ರತಿಬಂಧಿಸಲಾಗಿದೆ).
4. ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
5. ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವುದು. (ಉದಾ: ಅಂಗನವಾಡಿ ಕಟ್ಟಡ/ಶಾಲಾ ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಲು ರೂ.4.5 ಲಕ್ಷಗಳ

ಅವಶ್ಯಕತೆ ಇದ್ದಲ್ಲಿ, ಪೂರ್ಣ ರೂ.4.5 ಲಕ್ಷಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಕಾಯ್ದಿರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು).

6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
7. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
8. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
9. ಜನರ ಆಶೋತ್ತರಗಳಿಗೆ ಪೂರಕವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಶಿಫಾರಸ್ಸುಗಳನ್ವಯ ಕ್ರಿಯಾ ಯೋಜನೆ ತಯಾರಿಸುವುದು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದಲ್ಲಿ ಅಂತಹ ಯೋಜನೆಗಳು ತನಗೆ ತಾನೆ ರದ್ದಾಗುತ್ತದೆ.
10. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ಗ್ರಾಮ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.
11. ಗ್ರಾಮ ಪಂಚಾಯತಿಗಳು ಕ್ರಿಯಾ ಯೋಜನೆಗಳನ್ನು ತಯಾರಿಸುವಾಗ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 58 ಹಾಗು ಅದರಡಿಯಲ್ಲಿ ರಚಿತವಾಗಿರುವ ಅನುಬಂಧ–1 ರಲ್ಲಿ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ಮಾತ್ರ ಪರಿಗಣಿಸುವುದು.
12. ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
13. ಕ್ರಿಯಾ ಯೋಜನೆಯ ಪ್ರಗತಿಯನ್ನು ಪ್ರತಿ ತಿಂಗಳು ನಡೆಯುವ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.
14. ಕ್ರಿಯಾ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.
15. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.
16. ಗ್ರಾಮ ಪಂಚಾಯತಿಯಲ್ಲಿ ಪ್ರತಿ ವರ್ಷ ನಡೆಯುವ ಜಮಾಬಂಧಿಯಲ್ಲಿ ಈ ಯೋಜನೆಗಳ ವಿವರಗಳನ್ನು ಸಾರ್ವಜನಿಕರ ಮುಂದೆ ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಡಿಸುವುದು.
17. ಈ ಕ್ರಿಯಾ ಯೋಜನೆಯಲ್ಲಿ ನಿರ್ಮಿತವಾಗುವ ಎಲ್ಲಾ ಆಸ್ತಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸತಕ್ಕದ್ದು.
18. ಕ್ರಿಯಾ ಯೋಜನೆಯನ್ನು ಪ್ಲಾನ್ ಪ್ಲಸ್ ತಂತ್ರಾಂಶದ ಮೂಲಕ ರಚಿಸುವುದು ಮತ್ತು ಪ್ಲಾನ್ ಪ್ಲಸ್ ನಲ್ಲಿ ಅಳವಡಿಸುವುದು.
19. ಕಾಮಗಾರಿಯ ಪ್ರಗತಿಯನ್ನು ಆಕ್ಷನ್ ಸಾಫ್ಟ್‌ನಲ್ಲಿ ಅಳವಡಿಸುವುದು.

20. ಕ್ರಿಯಾ ಯೋಜನೆಯನ್ನು ರೂಪಿಸುವಾಗ ಕಾಮಗಾರಿಗಳಿಗೆ ಹಂಚಿಕೆ ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸುವುದು.

21. 13ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆಯು ಗ್ರಾಮ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 241, 243 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ-12, 72, 73, 74 ಹಾಗೂ ಅದರಡಿಯಲ್ಲಿ ನಿಗದಿಪಡಿಸಿರುವ ನಮೂನೆಗಳಿಗೆ ಅನುಸಾರವಾಗಿ ಸಿದ್ಧಪಡಿಸಬೇಕು).

**ತಾಲ್ಲೂಕು ಪಂಚಾಯತಿ:**

1. ಪ್ರಸಕ್ತ ಸಾಲಿನ ವಾರ್ಷಿಕ ಹಂಚಿಕೆಗೆ ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಸಂಪೂರ್ಣ ಅನುದಾನವನ್ನು ಪರಿಗಣಿಸುವುದು. (ಉದಾ: 2012-13ನೇ ಸಾಲಿನಲ್ಲಿ ರೂ.100.00 ಲಕ್ಷ ಬಿಡುಗಡೆಯಾಗಿದ್ದಲ್ಲಿ 2013-14ನೇ ಸಾಲಿಗೆ ರೂ.100.00 ಲಕ್ಷವನ್ನು ತಾತ್ಕಾಲಿಕ ವಾರ್ಷಿಕ ಹಂಚಿಕೆಯೆಂದು ಪರಿಗಣಿಸುವುದು).
2. 13ನೇ ಹಣಕಾಸು ಆಯೋಗದಡಿಯಲ್ಲಿ ವಾರ್ಷಿಕ ಬಿಡುಗಡೆಯಾಗುವ ಅನುದಾನಕ್ಕೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು. ಈ ಅಭಿವೃದ್ಧಿ ಯೋಜನೆಯು ತಾಲ್ಲೂಕು ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.
3. 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಡುಗಡೆಯಾಗುವ/ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಶೇ.90 ರಷ್ಟು ದೀರ್ಘ ಕಾಲ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು (ಕಟ್ಟಡಗಳು) ನಿರ್ಮಿಸಲು ಕಾಯ್ದಿರಿಸುವುದು, ಶೇ.10 ರಷ್ಟು ಇತರೆ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವುದು (ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪ್ರತಿಬಂಧಿಸಲಾಗಿದೆ).
4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
5. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವುದು. (ಉದಾ: ಅಂಗನವಾಡಿ ಕಟ್ಟಡ/ಗ್ರಾಮ ಪಂಚಾಯತಿ ಕಟ್ಟಡ/ಶಾಲಾ ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಲು ರೂ.5.00 ಲಕ್ಷಗಳ ಅವಶ್ಯಕತೆ ಇದ್ದಲ್ಲಿ, ಪೂರ್ಣ ರೂ.5.00 ಲಕ್ಷಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಕಾಯ್ದಿರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು).
6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
7. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
8. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
9. ಜನರ ಆಶೋತ್ತರಗಳಿಗೆ ಪೂರಕವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ

ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಶಿಫಾರಸ್ಸುಗಳನ್ವಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದಲ್ಲಿ ಅಂತಹ ಯೋಜನೆಗಳು ತನಗೆ ತಾನೆ ರದ್ದಾಗುತ್ತದೆ.

10. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.

11. ತಾಲ್ಲೂಕು ಪಂಚಾಯತಿಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 145 ಹಾಗು ಅದರಡಿಯಲ್ಲಿ ರಚಿತವಾಗಿರುವ ಅನುಬಂಧ–2 ರಲ್ಲಿ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ಮಾತ್ರ ಪರಿಗಣಿಸುವುದು.

12. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.

13. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ತಾಲ್ಲೂಕು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.

14. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.

15. ಪ್ರಗತಿ ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.

16. ತಾಲ್ಲೂಕು ಪಂಚಾಯತಿಯಲ್ಲಿ ಪ್ರತಿ ವರ್ಷ ನಡೆಯುವ ಜಮಾಬಂಧಿಯಲ್ಲಿ ಈ ಎಲ್ಲಾ ಯೋಜನೆಗಳ ವಿವರಗಳನ್ನು ಸಾರ್ವಜನಿಕರ ಮುಂದೆ ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಡಿಸುವುದನ್ನು ಕಡ್ಡಾಯಗೊಳಿಸಿದೆ.

17. 13ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆಯು ತಾಲ್ಲೂಕು ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 247, 250 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).

**ಜಿಲ್ಲಾ ಪಂಚಾಯತಿ:**

1. ಪ್ರಸಕ್ತ ಸಾಲಿನ ವಾರ್ಷಿಕ ಹಂಚಿಕೆಗೆ ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಸಂಪೂರ್ಣ ಅನುದಾನವನ್ನು ಪರಿಗಣಿಸುವುದು. (ಉದಾ: 2012–13ನೇ ಸಾಲಿನಲ್ಲಿ ರೂ.200.00 ಲಕ್ಷ ಬಿಡುಗಡೆಯಾಗಿದ್ದಲ್ಲಿ 2013–14ನೇ ಸಾಲಿಗೆ ರೂ.200.00 ಲಕ್ಷವನ್ನು ತಾತ್ಕಾಲಿಕ ವಾರ್ಷಿಕ ಹಂಚಿಕೆಯೆಂದು ಪರಿಗಣಿಸುವುದು).

2. 13ನೇ ಹಣಕಾಸು ಆಯೋಗದಡಿಯಲ್ಲಿ ವಾರ್ಷಿಕ ಬಿಡುಗಡೆಯಾಗುವ ಅನುದಾನಕ್ಕೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು. ಈ ಅಭಿವೃದ್ಧಿ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು. ಪ್ರತ್ಯೇಕವಾಗಿ ಅನುದಾನದ ಕಂತುವಾರು ಕ್ರಿಯಾ ಯೋಜನೆಯನ್ನು ತಯಾರಿಸುವುದನ್ನು ಪ್ರತಿಬಂಧಿಸಲಾಗಿದೆ.

3. 13ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಡುಗಡೆಯಾಗುವ/ತಯಾರಿಸುವ ಅಭಿವೃದ್ಧಿ ಯೋಜನೆಗಳಲ್ಲಿ ಶೇ.90 ರಷ್ಟು ದೀರ್ಘ ಕಾಲ ಬಾಳಿಕೆ ಬರುವಂತಹ ಮೂಲಭೂತ ಸೌಕರ್ಯಗಳನ್ನು (ಕಟ್ಟಡಗಳು) ನಿರ್ಮಿಸಲು ಕಾಯ್ದಿರಿಸುವುದು, ಶೇ.10 ರಷ್ಟು ಇತರೆ ಅಭಿವೃದ್ಧಿ ಯೋಜನೆಗಳಿಗೆ ಕಾಯ್ದಿರಿಸುವುದು (ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪ್ರತಿಬಂಧಿಸಲಾಗಿದೆ).
4. ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಠಿಕಾಂಶ, ನೀರು ಸಂರಕ್ಷಣೆಗಳನ್ನು ಅಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
5. ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಯೋಜನೆಗಳಿಗೆ ಅವಶ್ಯಕತೆ ಇರುವ ಪೂರ್ಣ ಅನುದಾನವನ್ನು ಕಾಯ್ದಿರಿಸುವುದು. (ಉದಾ: ಶಾಲಾ ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಲು ರೂ.10.00 ಲಕ್ಷಗಳ ಅವಶ್ಯಕತೆ ಇದ್ದಲ್ಲಿ, ಪೂರ್ಣ ರೂ.10.00 ಲಕ್ಷಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಕಾಯ್ದಿರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು).
6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಲ್ಯಾಣಕ್ಕಾಗಿ ಕನಿಷ್ಠ ಶೇ.25 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
7. ವಿಕಲಚೇತನರಿಗೆ ಅಭಿವೃದ್ಧಿ ಯೋಜನೆ ತಯಾರಿಸುವಾಗ ಶೇ.3 ರಷ್ಟನ್ನು ಕಡ್ಡಾಯವಾಗಿ ಕಾಯ್ದಿರಿಸಿ ಕಾರ್ಯಕ್ರಮ ರೂಪಿಸುವುದು.
8. ಲಿಂಗಾಧಾರಿತ ಆಯವ್ಯಯ ತಯಾರಿಸಿ ಅನುಷ್ಠಾನಗೊಳಿಸುವುದು.
9. ಜನರ ಆಶೋತ್ತರಗಳಿಗೆ ಪೂರಕವಾಗಿ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆ ಶಿಫಾರಸ್ಸುಗಳನ್ವಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದ್ದಲ್ಲಿ ಅಂತಹ ಯೋಜನೆಗಳು ತನಗೆ ತಾನೆ ರದ್ದಾಗುತ್ತದೆ.
10. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3 ಹಾಗು 3ಎ ಪ್ರಕಾರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಿಂದ ಪಡೆದ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದು ಕಡ್ಡಾಯಗೊಳಿಸಿದೆ.
11. ಜಿಲ್ಲಾ ಪಂಚಾಯತಿಗಳು ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 184 ಹಾಗು ಅದರಡಿಯಲ್ಲಿ ರಚಿತವಾಗಿರುವ ಅನುಬಂಧ-3 ರಲ್ಲಿ ಉಲ್ಲೇಖಿಸಿರುವ ಪ್ರಕಾರ್ಯಗಳನ್ನು ಮಾತ್ರ ಪರಿಗಣಿಸುವುದು.
12. ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸುವುದು.
13. ಅಭಿವೃದ್ಧಿ ಯೋಜನೆಯ ಪ್ರಗತಿಯನ್ನು ಎರಡು ತಿಂಗಳಿಗೊಮ್ಮೆ ನಡೆಯುವ ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪರಾಮರ್ಶೆ ನಡೆಸುವುದು.
14. ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವಾಗ ಯೋಜನೆ ಪ್ರಾರಂಭಗೊಳ್ಳುವ ಪೂರ್ವದ ಪರಿಸ್ಥಿತಿ, ಅನುಷ್ಠಾನಗೊಳಿಸುತ್ತಿರುವಾಗ ಇರುವ ಪರಿಸ್ಥಿತಿ, ಪೂರ್ಣಗೊಂಡ ನಂತರದ ಪರಿಸ್ಥಿತಿಯ ಪೂರ್ಣ ವರದಿ, ಅಗತ್ಯ ಛಾಯಾಚಿತ್ರದೊಂದಿಗೆ ದಾಖಲೀಕರಿಸುವುದು. ಈ ರೀತಿ ದಾಖಲೀಕರಿಸಿದ ದಾಖಲೆಗಳನ್ನು ಪಂಚತಂತ್ರ

ತಂತ್ರಾಂಶದಲ್ಲಿ ಅಳವಡಿಸುವುದು.

15. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪ್ರಮಾಣ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಮಾಹೆವಾರು ಕಡ್ಡಾಯವಾಗಿ ಅಳವಡಿಸುವುದು.

16. 13ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತಿಯ ಆಯವ್ಯಯ ಹಾಗೂ ಕ್ರೋಢಿಕೃತ ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು (ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 256, 258 ಹಾಗೂ ಅದರಡಿಯಲ್ಲಿ ರಚಿತವಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಗಳ ಹಣಕಾಸು ಮತ್ತು ಲೆಕ್ಕಗಳು) ನಿಯಮಗಳು, 1996ಕ್ಕೆ ಅನುಸಾರವಾಗಿ ಸಿದ್ಧಪಡಿಸಬೇಕು).

ಗ್ರಾಮ ಪಂಚಾಯತ್, ತಾಲೂಕ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಹಂತದಲ್ಲಿ 13ನೇ ಹಣಕಾಸು ಆಯೋಗದಡಿಯಲ್ಲಿ ನಿಷೇಧಿತ ಕಾಮಗಾರಿಗಳು/ಕಾರ್ಯಗಳು:

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ಪಂಚಾಯತ್ ಸಂಸ್ಥೆಗಳಿಗೆ ಭೂಮಿಯನ್ನು ಸ್ವಾಧೀನಗೊಳಿಸುವುದನ್ನು ಅಥವಾ ಸ್ವಾಧೀನಗೊಳಿಸಲಿರುವ ಭೂಮಿಗೆ ಪರಿಹಾರ ನೀಡುವುದನ್ನು;
4. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;
5. ಕಚೇರಿಯ ಆವರ್ತಕ ವೆಚ್ಚ, ಸಿಬ್ಬಂದಿ ವೇತನ ಭರಿಸುವುದು.;
6. ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
7. ಸಾದಿಲ್ವಾರು ವೆಚ್ಚ ಮಾಡುವುದನ್ನು;
8. ವಾಹನಗಳ ಖರೀದಿ, ದುರಸ್ತಿ, ಇಂಧನ ವೆಚ್ಚ ಅಥವಾ ಬಾಡಿಗೆ ಮೇಲೆ ವಾಹನಗಳನ್ನು ಕಛೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
9. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು
10. ಯಾವುದೇ ರೀತಿಯ ನೀರು ರಸ್ತೆ ಅಥವಾ ಇನ್ನ್ಯಾವುದೇ ನಿರ್ವಹಣೆ ಹಾಗು ದುರಸ್ತಿ ಕೈಗೊಳ್ಳುವುದನ್ನು.
11. ಬ್ಯಾಂಕಿನಿಂದ ಸ್ವಂತಕ್ಕೆ ಹಣ ಸೆಳೆಯುವ ಪ್ರಕ್ರಿಯೆ (ಇದನ್ನು ಉಲ್ಲಂಘಿಸಿದಲ್ಲಿ ಬ್ಯಾಂಕಿನಿಂದ ಹಣ ಸೆಳೆಯುವ ಅಧಿಕಾರಿ ಹಾಗೂ ಪಂ.ರಾಜ್ ಸಂಸ್ಥೆಯ ಪ್ರತಿನಿಧಿಗಳು ಆ ರೀತಿ ಸೆಳೆದ ಮೊತ್ತವನ್ನು ಶೇ. 15 ರ ಬಡ್ಡಿ ಮೊತ್ತದೊಂದಿಗೆ ಮರುಪಾವತಿ ಮಾಡುವುದರ ಜೊತೆಗೆ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು)
12. ಯಾವುದೇ ಕಾರಣಕ್ಕೂ 13ನೇ ಹಣಕಾಸು ಆಯೋಗದ ಅನುದಾನದಲ್ಲಿ ನೀರಿನ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (Operation and maintenance) ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ. ಕಾರಣ ಪ್ರತ್ಯೇಕವಾಗಿ ಗ್ರಾಮ ಪಂಚಾಯಿತಿಗಳಿಗೆ ಈ ವರ್ಷ ಏಪ್ರಿಲ್ 2013 ರಿಂದ ನೀರಿನ ಉಸ್ತುವಾರಿಗಾಗಿ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.
13. 13ನೇ ಹಣಕಾಸು ಆಯೋಗದ ಅನುದಾನವನ್ನು ಯಾವುದೇ ಕಾರಣಕ್ಕೂ ಚುನಾಯಿತ ಪ್ರತಿನಿಧಿಗಳ ಉಪವೇಶನ

ಶುಲ್ಕ, ಗೌರವಧನಕ್ಕಾಗಿ ಬಳಸುವುದನ್ನು ನಿಷೇಧಿಸಲಾಗಿದೆ.

14. ಈ ಅನುದಾನದಡಿಯಲ್ಲಿ ಯಾವುದೇ ರೀತಿಯ ಪ್ರವಾಸ ಕಾರ್ಯಕ್ರಮಗಳಿಗಾಗಿ (exposure visits, study tour) ಅನುದಾನವನ್ನು ಬಳಸುವುದನ್ನು ನಿಷೇಧಿಸಲಾಗಿದೆ.

15. ಯಾವುದೇ ಕಛೇರಿ ಕಟ್ಟಡಗಳ ನಿರ್ಮಾಣ ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ. ಉದಾ: ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಚೇರಿ ಕಟ್ಟಡಗಳು.

**ಕಾರ್ಯಕ್ರಮ ಅನುಷ್ಠಾನದ ಕಾರ್ಯಸೂಚಿ:**

1. ವಾರ್ಡ್ ಸಭೆ ಹಾಗು ಗ್ರಾಮ ಸಭೆ – ಏಪ್ರಿಲ್ ಮಾಹೆ
2. ಅಭಿವೃದ್ಧಿ ಯೋಜನೆಯ ತಯಾರಿಕೆ ಹಾಗು ಅನುಮೋದನೆ – ಏಪ್ರಿಲ್ ಮಾಹೆ
3. ಆಡಳಿತಾತ್ಮಕ ಅನುಮೋದನೆ/ತಾಂತ್ರಿಕ ಅನುಮೋದನೆ (ಸಕ್ಷಮ ಪ್ರಾಧಿಕಾರದಿಂದ) – ಮೇ, 15
4. ಯೋಜನೆಯ ಅನುಷ್ಠಾನ – ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮಾಹೆ
5. ಸಾಮಾಜಿಕ ಲೆಕ್ಕಪರಿಶೋಧನೆ (ಜಮಾಬಂಧಿ) – ಆಗಸ್ಟ್ 16 ರಿಂದ ಸೆಪ್ಟೆಂಬರ್ 15
6. ಪ್ರಗತಿ ವರದಿ ಅಪ್ ಲೋಡ್ – ಪ್ರತಿ ಮಾಹೆ 1ರಿಂದ 5ನೇ ದಿನಾಂಕದೊಳಗೆ
7. ವಾರ್ಷಿಕ ಹಣ ಬಳಕೆ ಪ್ರಮಾಣ ಪತ್ರ – ಪ್ರತಿ ವರ್ಷದ ಏಪ್ರಿಲ್ ಮಾಹೆ
8. Non-embezzlement and Non-duplication ಧೃಢೀಕರಣ ಪತ್ರಗಳನ್ನು ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗು ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧ್ಯಕ್ಷರು ಜಂಟಿಯಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಪಿ.ಕುಮಾರ್)
ನಿರ್ದೇಶಕರು (ಪಂ.ರಾಜ್) ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

# ಸುತ್ತೋಲೆ

ಸಂಖ್ಯೆ : ಗ್ರಾಅಪ 50 ಜಿಪಸ 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ : 18–04–2013

**ವಿಷಯ: ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿಆರ್‌ಜಿಎಫ್) ಯೋಜನೆಯ ಅನುಷ್ಠಾನದ ಬಗ್ಗೆ.**

ಕೇಂದ್ರ ಸರ್ಕಾರವು ರಾಷ್ಟ್ರೀಯ ಸಮಗ್ರ ವಿಕಾಸ ಯೋಜನೆಯನ್ನು ಮಾರ್ಪಡಿಸಿ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ರೂಪದಲ್ಲಿ ರಾಜ್ಯದ 6 ಜಿಲ್ಲೆಗಳಲ್ಲಿ ಅಂದರೆ, ಬೀದರ, ಗುಲ್ಬರ್ಗಾ, ಚಿತ್ರದುರ್ಗ, ದಾವಣಗೆರೆ, ರಾಯಚೂರು ಮತ್ತು ಯಾದಗಿರಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯು ಎರಡು ಭಾಗಗಳನ್ನು ಒಳಗೊಂಡಿರುತ್ತದೆ.

(1) ಜನರ ಸಹಭಾಗಿತ್ವದಲ್ಲಿ ಅಭಿವೃದ್ಧಿ ಯೋಜನೆಗಳ ತಯಾರಿ ಹಾಗು ಅನುಷ್ಠಾನ.

(2) ಸಾಮರ್ಥ್ಯಾಭಿವೃದ್ಧಿ

ರಾಜ್ಯದಲ್ಲಿ ಈ ಯೋಜನೆಯು ಪ್ರಥಮವಾಗಿ 2006–07ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ. ತದನಂತರದ ವರ್ಷಗಳಲ್ಲಿ ಉಳಿದ ಐದು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಬಿ.ಆರ್.ಜಿ.ಎಫ್. ಅನುಷ್ಠಾನದ ಬಗ್ಗೆ ಈಗಾಗಲೇ ಯೋಜನಾ ಮಾರ್ಗಸೂಚಿಯನ್ನು ಹೊರಡಿಸಿದ್ದು, ಅದರಂತೆ ಜಿಲ್ಲೆಗಳಿಗೆ ಬಿಡುಗಡೆಯಾಗುವ ಅನುದಾನವು ಮುಕ್ತನಿಧಿ ಯಾಗಿರುತ್ತದೆ. ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ಯೋಜನೆಗಳನ್ನು ರೂಪಿಸಿದ ನಂತರ ಯೋಜನೆಗಳಲ್ಲಿ ಕಂಡುಬರುವ ಅಂತರಗಳನ್ನು (gaps) ಕಡಿಮೆ ಮಾಡಲು ಹಾಗು ಹಿಂದುಳಿಯುವಿಕೆಯಿಂದ ಈ ಜಿಲ್ಲೆಗಳನ್ನು ಸಂಪೂರ್ಣವಾಗಿ ಮೇಲೆತ್ತಲು ಅಗತ್ಯ ಕ್ರಮ ಕೈಗೊಳ್ಳಲು ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿ.ಆರ್.ಜಿ.ಎಫ್.) ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಈ ಕೆಳಕಂಡ ಹೆಚ್ಚುವರಿ ಮಾರ್ಗಸೂಚಿಯನ್ನು ಅನುಸರಿಸುವಂತೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (ಬಿ.ಆರ್.ಜಿ.ಎಫ್.) ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳು ಹಾಗು ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಷಿಕ ಅನುದಾನದಲ್ಲಿ ಶೇ.80 ಹಾಗು ಶೇ.20ರ ಅನುಪಾತದಲ್ಲಿ ಹಂಚಿಕೆ ಮಾಡುವುದು.
2. ಪಂ.ರಾಜ್ ಸಂಸ್ಥೆಗಳಿಗೆ ನಿಗದಿಪಡಿಸಿರುವ ಅನುದಾನದಲ್ಲಿ ಗ್ರಾಮ ಪಂಚಾಯತಿಗಳಿಗೆ ಶೇ.70 ರಷ್ಟು, ತಾಲ್ಲೂಕು ಪಂಚಾಯತಿಗೆ ಶೇ.20ರಷ್ಟು ಹಾಗು ಜಿಲ್ಲಾ ಪಂಚಾಯತಿಗಳಿಗೆ ಶೇ.10 ರಷ್ಟು ನಿಗದಿಪಡಿಸಿ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸುವುದು.
3. 2013–14 ಹಾಗು ತದನಂತರದ ವರ್ಷಗಳ ಸಮಗ್ರ ಜಿಲ್ಲಾ ಯೋಜನೆ(District Plan), ಗ್ರಾಮ ಸಭೆಗಳ ಮೂಲಕ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳ ಕ್ರೋಢಿಕೃತ ಅಭಿವೃದ್ಧಿ ಯೋಜನೆಯಾಗಿರಬೇಕು.

4. 2013–14ನೇ ಸಾಲಿನ ಜಿಲ್ಲಾ ಯೋಜನೆ(District Plan)ಯನ್ನು ತಯಾರಿಸುವಾಗ ಪಂ.ರಾಜ್ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ 24 ಇಲಾಖೆಗಳ ಕೇಂದ್ರ ಪುರಸ್ಕೃತ ಯೋಜನೆ, ಕೇಂದ್ರ ಅನುದಾನಗಳು, ರಾಜ್ಯ ಪುರಸ್ಕೃತ ಯೋಜನೆಗಳು, ಅನುದಾನಗಳು, ಜಿಲ್ಲಾ ವಲಯದ ಯೋಜನೆಗಳು, ಯೋಜನೆ ಹಾಗು ಯೋಜನೇತರ ಕಾರ್ಯಕ್ರಮಗಳು, ಬಾಹ್ಯ ನೆರವಿನ ಯೋಜನೆಗಳು ಹಾಗು ಅನಿರ್ಬಂಧಿತ ಅನುದಾನಗಳನ್ನು ಸಮ್ಮಿಳನಗೊಳಿಸಿ ರಚಿಸಬೇಕಾಗಿರುತ್ತದೆ. ಈ ರೀತಿ ತಯಾರಿಸಲಾಗಿರುವ ಜಿಲ್ಲಾ ಯೋಜನೆ(District Plan) ದಾಖಲೆಯಾದ ಮೇಲೆ ಬಿಆರ್‌ಜಿಎಫ್‌ನ 2013–14ರ ಕ್ರಿಯಾ ಯೋಜನೆಯನ್ನು ತಯಾರಿಸಬೇಕು. ಬಿ.ಆರ್.ಜಿ.ಎಫ್. ಅನುದಾನವನ್ನು gap filling ಗಾಗಿ ಉಪಯೋಗಿಸುವುದು. ಇದನ್ನು ಕಡ್ಡಾಯವಾಗಿ ತಯಾರಿಸುವುದು ಹಾಗೂ ಪ್ಲಾನ್–ಪ್ಲಸ್(Plan Plus) ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.

5. ಜಿಲ್ಲಾ ಯೋಜನೆ 2013–14 ಹಾಗೂ ಅದರ ಆಧಾರದ ಮೇಲೆ ಬಿಆರ್‌ಜಿಎಫ್ Action Plan 2013–14 ಯೋಜನೆಯನ್ನು ತಯಾರಿಸಲು ಎಸ್.ಐ.ಆರ್.ಡಿ ಸಂಸ್ಥೆಯವರು Base Line Survey ಹಾಗೂ Perspective Plan ಮಾಡಿದ್ದಲ್ಲಿ ಅದನ್ನು ಸಹ ಪರಿಗಣಿಸುವುದು. ಈ ಕಾರ್ಯಕ್ಕೆ ಎಸ್.ಐ.ಆರ್.ಡಿ ಸಂಸ್ಥೆಯವರು ಪ್ರತಿ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಹಾಯ ಮಾಡಲು ನಿರ್ದೇಶಕರು, ಎಸ್.ಐ.ಆರ್.ಡಿ ಹಾಗೂ ಅವರ ತಂಡದ ಅಧಿಕಾರಿಗಳು ಮುಂದಿನ 10 ದಿನಗಳಲ್ಲಿ ನಿಯೋಜಿಸುವುದು. 2013–14 ನೇ ಸಾಲಿನ ಬಿಆರ್‌ಜಿಎಫ್ (BRGF) Action Plan ಹಾಗೂ ಜಿಲ್ಲಾ ಯೋಜನೆ(District Plan)ನ್ನು ಮೇ 31ರೊಳಗಾಗಿ ಸರ್ಕಾರಕ್ಕೆ ಸಲ್ಲಿಸುವುದು.

6. ಬಿ.ಆರ್.ಜಿ.ಎಫ್. ಯೋಜನೆಯಡಿಯಲ್ಲಿ gap filling ಮಾಡುವ ಸಲುವಾಗಿ ಮಾತ್ರ ಅನುದಾನವನ್ನು ಉಪಯೋಗಿಸತಕ್ಕದ್ದು. ಈ ಜಿಲ್ಲೆಗಳ ಹಿಂದುಳಯುವಿಕೆಯ ಮಾನದಂಡದಲ್ಲಿ ಗುಣಾತ್ಮಕ ಬದಲಾವಣೆಯನ್ನು ತರಲು ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಹಾಗೂ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಶೇ.90 ರಷ್ಟು ಅನುದಾನವನ್ನು ದೀರ್ಘ ಕಾಲದ ಬಾಳಿಕೆ(Permanent Asset Creation) ಬರುವಂತಹ ಮೂಲಭೂತ ಸೌಕರ್ಯ ನಿರ್ಮಿಸಲು ಹಾಗು ಶೇ.10 ರಷ್ಟನ್ನು ಇತರೆ ಕಾರ್ಯಕ್ರಮಗಳಿಗೆ ಉಪಯೋಗಿಸುವುದು.

7. ಜಿಲ್ಲೆಯ ಬಿಆರ್‌ಜಿಎಫ್ ಅನುದಾನದ ಯಾವುದೇ ತರಬೇತಿ ಕಾರ್ಯಕ್ರಮಗಳನ್ನು ಅಥವಾ ಮಾನ್ಯತೆ ಭೇಟಿಗಳಾಗಲಿ (Exposure Visit), ಎಸ್.ಐ.ಆರ್.ಡಿ ಮುಖಾಂತರವಾಗಲಿ, ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರವಾಗಲಿ ಅಥವಾ ಪಂಚಾಯತ ರಾಜ್ ಸಂಸ್ಥೆಗಳ ಮುಖಾಂತರವಾಗಲಿ ಹಮ್ಮಿಕೊಳ್ಳಲು ಅನುದಾನವನ್ನು ಕಾಯ್ದಿರಿಸಬಾರದು. ಕಾರಣ ಸಾಮರ್ಥ್ಯವರ್ಧನೆ(Capacity Building) ತರಬೇತಿಗಾಗಿ ಎಸ್.ಐ.ಆರ್.ಡಿಗೆ ಕೇಂದ್ರ ಸರ್ಕಾರದಿಂದ ಪ್ರತ್ಯೇಕ ಅನುದಾನ ಬಿಡುಗಡೆಯಾಗುತ್ತದೆ.

8. ಪ್ಲಾನ್–ಪ್ಲಸ್(Plan Plu) ಹಾಗು ಆಕ್ಷನ್ ಸಾಫ್ಟ್ (Action Soft)ತಂತ್ರಾಂಶದಲ್ಲಿ 2013–14ನೇ ಸಾಲಿನ ಕ್ರಿಯಾಯೋಜನೆ ಹಾಗೂ ಪ್ರಗತಿ ವರದಿಯನ್ನು ಈ ಹಿಂದಿನ ಸಾಲಿನ ಅನುದಾನವನ್ನು ಒಳಗೊಂಡಂತೆ ಕೂಡಲೇ ಅಳವಡಿಸುವುದು.

9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಿಪಿಎಂಯು ವಿಭಾಗದ ವತಿಯಿಂದ ಮುಂದಿನ 10 ದಿನಗಳಲ್ಲಿ ಈ ಜಿಲ್ಲೆಯ ಅಧಿಕಾರಿಗಳಿಗೆ ಪ್ಲಾನ್–ಪ್ಲಸ್ (Plan Plu) ಹಾಗು ಆಕ್ಷನ್ ಸಾಫ್ಟ್ (Action Soft)ತಂತ್ರಾಂಶದ ಬಗ್ಗೆ ಎಲ್ಲಾ ಪಿಡಿಓ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ Refresher ತರಬೇತಿ ನೀಡುವುದು.

10. ಯೋಜನಾ ಜಿಲ್ಲೆಗಳಲ್ಲಿ ಕನಿಷ್ಠ 2 ತಿಂಗಳಿಗೊಮ್ಮೆ ಜಿಲ್ಲಾ ಯೋಜನಾ ಸಮಿತಿ(DPC)ಯ ಸಭೆಗಳನ್ನು ನಡೆಸಬೇಕು ಹಾಗು ಅಭಿವೃದ್ಧಿ ಯೋಜನೆಯ ಸಭೆ ಹಾಗು ಬಿ.ಆರ್.ಜಿ.ಎಫ್. ಪ್ರಗತಿ ಪರಿಶೀಲನೆ ನಡೆಸುವುದು.

11. ಬಿ.ಆರ್.ಜಿ.ಎಫ್. ಯೋಜನೆಯ ಪ್ರಗತಿಯನ್ನು ಜಿಲ್ಲೆಯಲ್ಲಿ ನಡೆಯುವ ಜಿಲ್ಲಾ ಅಭಿವೃದ್ಧಿ ಯೋಜನೆಯ ಪ್ರಗತಿ ಪರಿಶೀಲನೆ ಸಭೆ(KDP Meeting) ಹಾಗು ಪಂ.ರಾಜ್ ಸಂಸ್ಥೆಗಳ ಹಾಗು ನಗರ ಸ್ಥಳೀಯ ಸಂಸ್ಥೆಗಳ ಪ್ರತಿ ತಿಂಗಳ ಸಾಮಾನ್ಯ ಸಭೆಯಲ್ಲಿ ಕಡ್ಡಾಯವಾಗಿ ಪ್ರಗತಿ ವರದಿಯನ್ನು ನಮೂದಿಸಿ ಅದರ ಬಗ್ಗೆ ಪರಿಶೀಲನೆ ಮಾಡುವುದು.

12. ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನವನ್ನು ಪ್ರತಿ ವರ್ಷ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುವ ಜಮಾಬಂಧಿಯಲ್ಲಿ ಗ್ರಾಮ ಪಂಚಾಯತಿ ಯೋಜನೆ, ತಾಲ್ಲೂಕು ಪಂಚಾಯತಿ ಯೋಜನೆ ಹಾಗು ಜಿಲ್ಲಾ ಪಂಚಾಯತಿ ಯೋಜನೆಯನ್ನು ಕಡ್ಡಾಯವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವುದು.

13. ನಗರ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಶೇ.20ರ ಅನುದಾನದಲ್ಲಿ ಜಿಲ್ಲೆಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ನಿಗದಿಪಡಿಸುವುದು.

14. ಜಿಲ್ಲಾ ಅಭಿವೃದ್ಧಿ ಯೋಜನೆಯಲ್ಲಿ ಈ ಸ್ಥಳೀಯ ಸಂಸ್ಥೆಗಳ ವಾರ್ಷಿಕ ಅಭಿವೃದ್ಧಿ ಯೋಜನೆಗಳು ಸಹ ಒಂದು ಅಂಗವಾಗಿರಬೇಕು.

15. ಬಿ.ಆರ್.ಜಿ.ಎಫ್. ಯೋಜನೆಯ ಅನುಷ್ಠಾನದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಆಗುವುದರಿಂದ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳು ಆ ಸಭೆಗಳಲ್ಲಿ ಭಾಗವಹಿಸಬೇಕು.. ಜಿಲ್ಲಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ ಪ್ರತಿ ಮಾಹೆ ಯೋಜನೆ ಅನುಷ್ಠಾನದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೆರವು ನೀಡುವುದು.

16. ಈ ಯೋಜನೆಯ ಜಿಲ್ಲೆಗಳಲ್ಲಿ ಸಾಮರ್ಥ್ಯಾಭಿವೃದ್ಧಿಗೆ ಎ.ಎನ್.ಎಸ್.ಎಸ್.ಐ.ಆರ್.ಡಿ. ಸಂಸ್ಥೆಯು ನೋಡಲ್ ಸಂಸ್ಥೆಯಾಗಿದ್ದು, ಯಾವ ರೀತಿಯ ತರಬೇತಿಗಳು ಜಿಲ್ಲೆಗೆ ಅವಶ್ಯಕತೆ ಇದೆ ಎನ್ನುವ ಬಗ್ಗೆ ಪ್ರತಿ ಜಿಲ್ಲೆಯಲ್ಲಿ 24 ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಭೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಯೋಜಿಸತಕ್ಕದ್ದು. ಈ ಸಭೆಯಲ್ಲಿ ಹೊರಹೊಮ್ಮುವ ಅಂಶಗಳನ್ನು ಪೂರಕವಾಗಿ ಪರಿಗಣಿಸಿ ಜಿಲ್ಲಾವಾರು ವಾರ್ಷಿಕ ತರಬೇತಿಯನ್ನು ಎಸ್.ಐ.ಆರ್.ಡಿ. ಸಂಸ್ಥೆಯವರು ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮವು ಮಾರ್ಚ್ 2013ರ ಅಂತ್ಯದಲ್ಲಿಯೇ ಪೂರ್ಣಗೊಂಡು 2013–14ನೇ ಸಾಲಿನಲ್ಲಿ ನೀಡುವ ತರಬೇತಿಯ ವೇಳಾಪಟ್ಟಿ ಹಾಗು ಪ್ರಕ್ರಿಯೆಯನ್ನು ಅಂತಿಮಗೊಳಿಸಿ ಅನುಷ್ಠಾನಗೊಳಿಸುವಂತೆ ಸೂಚಿಸಿದೆ.

17. ಮೇಲೆ ವಿವರಿಸಿರುವ ಅನುಷ್ಠಾನದ ನಿಯಮಗಳನ್ನು ಪಾಲಿಸುವ ಜವಾಬ್ದಾರಿಯನ್ನು ಆಯಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಹಿಸಿದೆ.

**(ಪಿ.ಕುಮಾರ್)**

ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.



ಕೇಂದ್ರ ಪಂಚಾಯತ್ ರಾಜ್ ಸಚಿವರಿಂದ ಶಿವಮೊಗ್ಗ ಜಿಲ್ಲೆ,
ಶಿಕಾರಿಪುರ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಪ್ರಶಸ್ತಿ ಸ್ವೀಕರಿಸುತ್ತಿರುವುದು.




ಕೇಂದ್ರ ಪಂಚಾಯತ್ ರಾಜ್ ಸಚಿವರಿಂದ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ
ಮರವಂತೆ ಗ್ರಾಮ ಪಂಚಾಯತಿ ಅಧ್ಯಕ್ಷರು ಪ್ರಶಸ್ತಿ ಸ್ವೀಕರಿಸುತ್ತಿರುವುದು.

**KARNATAKA VIKAS : June 2013**

A Monthly Magazine for Rural Development and Panchayat Raj Department, Government of Karnataka
Regd No. KA/ BGGPO/2531/2012-14, Licence to Post "without Prepayment" WPP-32
RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month



ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ಕಲ್ಲಮುಂಡ್ಕೂರು ಗ್ರಾಮ
ಪಂಚಾಯತಿ ಕಚೇರಿ.

Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : Rs. 5.00
ಬೆಲೆ : ರೂ. 5.00